# ಕೇಂದ್ರ ಸರ್ಕಾರದ
# ಗ್ರಾಮೀಣ ನೈರ್ಮಲ್ಯ ಯೋಜನೆ

**ಸಂಪೂರ್ಣ ನೈರ್ಮಲ್ಯ ಆಂದೋಲನ**
**ಮಾರ್ಗದರ್ಶಿ ಸೂತ್ರಗಳು**

ಕುಡಿಯುವ ನೀರು ಸರಬರಾಜು ಇಲಾಖೆ
ಗ್ರಾಮೀಣ ಅಭಿವೃದ್ಧಿ ಸಚಿವಾಲಯ
ಭಾರತ ಸರ್ಕಾರ
ಜನವರಿ 2004

# ಪರಿವಿಡಿ


| ಕ್ರ. ಸಂ. | ವಿಷಯ | ಪುಟ |
|---|---|---|
| 1. | ಹಿನ್ನೆಲೆ | **1** |
| 2. | ಉದ್ದೇಶಗಳು | **2** |
| 3. | ಕಾರ್ಯವಿಧಾನ | **2** |
| 4. | ಅನುಷ್ಠಾನ | **2** |
| 5. | ಪ್ರಧಾನ ಅಂಶಗಳು<br>ಅ. ಪ್ರಾರಂಭಿಕ ಚಟುವಟಿಕೆಗಳು<br>ಆ. ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು<br>ಇ. ಗ್ರಾಮೀಣ ನೈರ್ಮಲ್ಯ ಮಳಿಗೆಗಳು ಮತ್ತು ಉತ್ಪಾದನಾ ಕೇಂದ್ರಗಳು<br>ಈ. ವೈಯಕ್ತಿಕ ಗೃಹ ಶೌಚಾಲಯ ನಿರ್ಮಾಣ<br>ಉ. ಸಮುದಾಯ ಶೌಚ ಸಮುಚ್ಚಯ<br>ಊ.ಶಾಲಾ ನೈರ್ಮಲ್ಯ ಮತ್ತು ಶುಚಿತ್ವ ಶಿಕ್ಷಣ ಮತ್ತು ಅಂಗನವಾಡಿ ಶೌಚಾಲಯಗಳು<br>ಎ. ಆಡಳಿತಾತ್ಮಕ ವೆಚ್ಚಗಳು | 3<br>3<br>3<br>4<br>4<br>5<br>6<br>7 |
| 6. | ರಾಷ್ಟ್ರೀಯ ಯೋಜನಾ ಮಂಜೂರಾತಿ ಸಮಿತಿ | **7** |
| 7. | ವಿಶೇಷ ಅವಕಾಶಗಳು | **7** |
| 8. | ಅನುಷ್ಠಾನಗೊಳಿಸುವ ಸಂಸ್ಥೆಗಳು | **7** |
| 9. | ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ | **8** |
| 10. | ಸರ್ಕಾರೇತರ ಸಂಸ್ಥೆಗಳ (ಎನ್.ಜಿ.ಒ.ಗಳ) ಪಾತ್ರ | **8** |
| 11. | ಯೋಜನೆ ಅನುದಾನ | **9** |
| 12. | ಅನುದಾನ ಬಿಡುಗಡೆ | **9** |
| 13. | ಯೋಜನಾ ಅನುದಾನದ ಮೇಲೆ ಗಳಿಸಿದ ಬಡ್ಡಿಯ ಉಪಯೋಗ(ವಿನಿಯೋಗ) | **10** |
| 14. | ನಿರ್ವಹಣೆ | **11** |
| 15. | ಪರಿಶೀಲನೆ | **11** |
| 16. | ಯೋಜನೆಯ ಪುನರ್ ಪರಿಶೀಲನೆ | **11** |
| 17. | ವರದಿಗಳು | **11** |
| 18. | ಮೌಲ್ಯಮಾಪನ | **12** |
| 19. | ನಿರ್ಮಲ ಗ್ರಾಮ ಪುರಸ್ಕಾರ(ಪ್ರಶಸ್ತಿ) | **12** |
| 20. | ಸಂಶೋಧನೆ | **13** |
| 21. | ವಾರ್ಷಿಕ ಲೆಕ್ಕ ಪರಿಶೋಧನೆ | **13** |
| 22. | ಯೋಜನೆಯನ್ನು ಪೂರ್ಣಗೊಳಿಸುವಿಕೆ | **13** |

| | | |
|---|---|---|
| 23. | ಅಡಕಗಳು | **15 -** |

# ಸಂಪೂರ್ಣ ನೈರ್ಮಲ್ಯ ಆಂದೋಲನ

**ಹಿನ್ನೆಲೆ:**

1. ಪ್ರತಿಯೊಬ್ಬರ ಉತ್ತಮ ಆರೋಗ್ಯ ಮತ್ತು ಶುಚಿತ್ವಕ್ಕೆ ಸಾಕಷ್ಟು ಪ್ರಮಾಣದ ಕುಡಿಯುವ ನೀರು ಮತ್ತು ಉತ್ತಮ ನೈರ್ಮಲ್ಯ ವ್ಯವಸ್ಥೆಗಳು ಅತ್ಯಗತ್ಯವಾಗಿರುತ್ತವೆ. ಆದುದರಿಂದ ನೀರು, ನೈರ್ಮಲ್ಯ ಮತ್ತು ಆರೋಗ್ಯದ ವಿಚಾರಗಳು ಒಂದಕ್ಕೊಂದು ನೇರವಾಗಿ ಸಂಬಂಧಪಟ್ಟಿರುತ್ತವೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಕಲುಶಿತ ನೀರಿನ ಸೇವನೆ, ಅನುಚಿತ ಮಲ ವಿಲೇವಾರಿ ಪದ್ಧತಿ, ಅಸಮರ್ಪಕ ಪರಿಸರ ನೈರ್ಮಲ್ಯ ವ್ಯವಸ್ಥೆ, ವೈಯಕ್ತಿಕ ಶುಚಿತ್ವ ಹಾಗೂ ಆಹಾರ ಶುಚಿತ್ವದ ಕೊರತೆಯು ಹಲವಾರು ರೋಗಗಳಿಗೆ ಕಾರಣವಾಗಿದೆ. ಭಾರತ ದೇಶವೂ ಇದರಿಂದ ಹೊರತೇನಲ್ಲ. ಶುಚಿತ್ವದ ಕೊರತೆಯು ಶಿಶುಮರಣದ ಪ್ರಮಾಣವನ್ನು ಹೆಚ್ಚಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು 1986 ರಲ್ಲಿ ಗ್ರಾಮೀಣ ನೈರ್ಮಲ್ಯ ಯೋಜನೆಯನ್ನು ಜಾರಿಗೆ ತಂದಿತು. ಗ್ರಾಮೀಣ ಜನರ ಜೀವನಮಟ್ಟ ಸುಧಾರಿಸುವುದು ಮತ್ತು ಮಹಿಳೆಯರಿಗೆ ಶೌಚಕ್ಕಾಗಿ ಮರೆಯಾದ ಜಾಗವನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶ.

2. ಈ ಮೊದಲು ಕೇವಲ ತೆರೆದ ಗುಂಡಿ, ಬಕೆಟ್ ಶೌಚಾಲಯ ಇತ್ಯಾದಿಗಳ ಮೂಲಕ ಮಲ ವಿಲೇವಾರಿ ಮಾಡುವುದು ನೈರ್ಮಲ್ಯದ ಕಲ್ಪನೆಯಾಗಿತ್ತು. ಆದರೆ ಇಂದಿನ ನೈರ್ಮಲ್ಯದ ಕಲ್ಪನೆ ಘನ ಮತ್ತು ದ್ರವ ತ್ಯಾಜ್ಯ ವಸ್ತುಗಳ ವಿಲೇವಾರಿ, ಆಹಾರ ಮತ್ತು ವೈಯಕ್ತಿಕ ಶುಚಿತ್ವ, ಗೃಹ ಮತ್ತು ಪರಿಸರ ಶುಚಿತ್ವವನ್ನು ಕೂಡ ಒಳಗೊಂಡಿರುತ್ತದೆ. ಉತ್ತಮ ನೈರ್ಮಲ್ಯದ ಕಲ್ಪನೆಯು ಕೇವಲ ಸಾಮಾನ್ಯ ಆರೋಗ್ಯದ ದೃಷ್ಠಿಯಿಂದಲ್ಲದೇ ವ್ಯಕ್ತಿಯ ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲೂ ಪ್ರಮುಖ ಪಾತ್ರವಹಿಸುತ್ತದೆ. ಜೀವನದ ಗುಣಮಟ್ಟ ಮತ್ತು ಮಾನವ ಅಭಿವೃದ್ಧಿ ಸೂಚಕಗಳನ್ನು ನಿರ್ಧರಿಸುವಲ್ಲಿ ನೈರ್ಮಲ್ಯವು ಒಂದು ಪ್ರಮುಖ ಅಂಶ. ಉತ್ತಮ ನೈರ್ಮಲ್ಯ ಅಭ್ಯಾಸಗಳು ನೀರು ಮತ್ತು ಮಣ್ಣು ಕಲುಷಿತವಾಗುವುದನ್ನು ತಡೆಯುವುದರ ಜೊತೆಗೆ ರೋಗಗಳನ್ನೂ ತಡೆಗಟ್ಟುತ್ತದೆ. ಆದುದರಿಂದ ನೈರ್ಮಲ್ಯದ ಕಲ್ಪನೆಯು ವೈಯಕ್ತಿಕ ಶುಚಿತ್ವ, ಗೃಹ ನೈರ್ಮಲ್ಯ, ಶುದ್ಧ ನೀರು, ತ್ಯಾಜ್ಯ ವಸ್ತುಗಳ ವಿಲೇವಾರಿ, ಮಲ ಮೂತ್ರ ವಿಲೇವಾರಿ ಹಾಗೂ ಬಳಸಿದ ನೀರಿನ ವಿಲೇವಾರಿಯೂ ಒಳಗೊಂಡಂತೆ ಎಲ್ಲದರ ಶುಚಿತ್ವವಾಗಿರುತ್ತದೆ.

3. ದೆಹಲಿಯ ಭಾರತೀಯ ಸಮೂಹ ಸಂವಹನ ಸಂಸ್ಥೆಯು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ 1996-97ರಲ್ಲಿ ನಡೆಸಿದ ಸಮೀಕ್ಷೆಯು ಜನರಲ್ಲಿ ನೈರ್ಮಲ್ಯ ಕುರಿತಾಗಿ ಇರುವ ತಿಳುವಳಿಕೆ, ಮನೋಭಾವ ಮತ್ತು ಅಭ್ಯಾಸಗಳ ಬಗ್ಗೆ ಅನೇಕ ಅಂಶಗಳನ್ನು ಬೆಳಕಿಗೆ ತಂದಿತು. ಈ ಸಮೀಕ್ಷೆಗೆ ಒಳಪಟ್ಟ ಕುಟುಂಬಗಳಲ್ಲಿ ಶೇ.55 ಕುಟುಂಬಗಳು ಸ್ವಯಂ ಪ್ರೇರಣೆಯಿಂದ ಖಾಸಗಿ ಶೌಚಾಲಯಗಳನ್ನು ಹೊಂದಿದ್ದವು. ಇದರಲ್ಲಿ ಶೇ.2ರಷ್ಟು ಕುಟುಂಬಗಳು ಮಾತ್ರ ಸಹಾಯಧನದಿಂದ ಪ್ರೇರಿತರಾಗಿರುವುದಾಗಿಯೂ ಮತ್ತು ಶೇ.54ರಷ್ಟು ಕುಟುಂಬಗಳು ಅವರ ಅನುಕೂಲಕ್ಕಾಗಿ ಶೌಚಾಲಯಗಳನ್ನು ನಿರ್ಮಿಸಿಕೊಂಡಿರುವುದಾಗಿಯೂ ತಿಳಿಸಿದವು. ಶೇ.51 ರಷ್ಟು ಕುಟುಂಬಗಳು ಶೌಚಾಲಯ ನಿರ್ಮಾಣಕ್ಕಾಗಿ ರೂ.1000/-ಗಳವರೆಗೆ ಖರ್ಚು ಮಾಡಲು ಸಿದ್ಧವಿರುವುದಾಗಿಯೂ ಹೇಳಿದ್ದವು.

4. ಮೇಲ್ಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಕೇಂದ್ರ ಗ್ರಾಮೀಣ ನೈರ್ಮಲ್ಯ ಯೋಜನೆಯನ್ನು ಸುಧಾರಣೆ ಮಾಡಲಾಯಿತು. ಬೇಡಿಕೆ ಆಧರಿಸಿದ ಈ ಸುಧಾರಿತ ಯೋಜನೆಯು "ಸಂಪೂರ್ಣ ನೈರ್ಮಲ್ಯ ಆಂದೋಲನ"ವಾಗಿ (ಟಿ.ಎಸ್.ಸಿ.–ಟೋಟಲ್ ಸ್ಯಾನಿಟೇಷನ್ ಕ್ಯಾಂಪೇನ್) ರೂಪುಗೊಂಡಿದೆ. ಇದರಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂವಹನ, ಮಾನವ ಸಂಪನ್ಮೂಲ ಅಭಿವೃದ್ಧಿ, ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳ ಮೂಲಕ ಗ್ರಾಮೀಣ ಜನರಲ್ಲಿ ಅರಿವು ಮೂಡಿಸುವುದು ಮತ್ತು ನಿರ್ಮಲ ಪರಿಸರಕ್ಕಾಗಿ ಬೇಡಿಕೆ ಸೃಷ್ಠಿಸುವುದು ಪ್ರಮುಖವಾಗಿದೆ. ಜನರು ತಮ್ಮ ಆರ್ಥಿಕ ಅನುಕೂಲಕ್ಕೆ ತಕ್ಕಂತೆ ಸೂಕ್ತವಾದ ನೈರ್ಮಲ್ಯ ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುವಂತೆ ಅವರ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ. ಒಟ್ಟು ನಿರ್ಮಲ ವಾತಾವರಣ ಸೃಷ್ಠಿಗೆ ಪ್ರತಿ ವ್ಯಕ್ತಿಯ ಶುಚಿತ್ವ ಮತ್ತು ಆರೋಗ್ಯ ಮುಖ್ಯವಾಗಿದ್ದು ಇದನ್ನು ಸಮುದಾಯದ ನೇತ್ರತ್ವದ ಮೂಲಕ ಸಾಧಿಸುವುದು ಈ ಯೋಜನೆಯ ಉದ್ದೇಶ. ಮಕ್ಕಳು ಹೊಸ ವಿಚಾರ ಮತ್ತು ಆಲೋಚನೆಗಳನ್ನು ಬಹು ಬೇಗ ಅರಿತುಕೊಂಡು ಆಚರಣೆಗೆ ತರುವಲ್ಲಿ ಪರಿಣಾಮಕಾರಿ ಪಾತ್ರ ವಹಿಸುವುದರಿಂದ ಈ ಯೋಜನೆಯು ಮಕ್ಕಳ ಮೂಲಕ ಶಾಲೆಯಲ್ಲಿ ಮತ್ತು ತಮ್ಮ ತಮ್ಮ ಮನೆಗಳಲ್ಲಿ ನೈರ್ಮಲ್ಯ ಅಭ್ಯಾಸಗಳನ್ನು ಅನುಷ್ಠಾನಗೊಳಿಸುವುದಾಗಿದೆ. ಈ ಯೋಜನೆಯ ಗುರಿಯು ರಾಷ್ಟ್ರದ ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲಾ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯ ಒದಗಿಸುವುದಾಗಿದೆ.

## ಉದ್ದೇಶಗಳು:

5. ಸಂಪೂರ್ಣ ನೈರ್ಮಲ್ಯ ಆಂದೋಲನದ ಮುಖ್ಯ ಉದ್ದೇಶಗಳು ಹೀಗಿವೆ :

- ಗ್ರಾಮೀಣ ಜನರ ಜೀವನ ಮಟ್ಟದಲ್ಲಿ ಸುಧಾರಣೆ ತರುವುದು.
- ಗ್ರಾಮೀಣ ಪ್ರದೇಶದ ನಿರ್ಮಲೀಕರಣವನ್ನು ತ್ವರಿತಗೊಳಿಸುವುದು.
- ಜನರಿಗೆ ಶುಚಿತ್ವದ ಬಗ್ಗೆ ಅರಿವು ಮತು ಆರೋಗ್ಯ ಶಿಕ್ಷಣ ನೀಡುವ ಮೂಲಕ ನೈರ್ಮಲ್ಯದ ಅಗತ್ಯವನ್ನು ಮನವರಿಕೆ ಮಾಡಿಕೊಡುವದು ಹಾಗೂ ಸ್ವಚ್ಚ ಪರಿಸರಕ್ಕಾಗಿ ಜನರಿಂದಲೇ ಬೇಡಿಕೆ ಸೃಷ್ಟಿಸುವುದು.
- ಗ್ರಾಮೀಣ ಪ್ರದೇಶದ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವುದು ಮತ್ತು ವಿದ್ಯಾರ್ಥಿಗಳಲ್ಲಿ ಶುಚಿತ್ವ ಮತ್ತು ನೈರ್ಮಲ್ಯದ ಹವ್ಯಾಸಗಳನ್ನು ಉತ್ತೇಜಿಸುವುದು.
- ಕಡಿಮೆ ವೆಚ್ಚದ ಮತ್ತು ಸೂಕ್ತ ತಾಂತ್ರಿಕತೆಯ ನೈರ್ಮಲ್ಯ ಸೌಲಭ್ಯಗಳನ್ನು ಪ್ರೋತ್ಸಾಹಿಸುವುದು.
- ಕುಡಿಯುವ ನೀರಿನ ಮೂಲಗಳು ಮತ್ತು ಆಹಾರ ಕಲುಷಿತವಾಗುವುದನ್ನು ತಡೆಯಲು ಬಯಲು ಮಲ ವಿಸರ್ಜನೆಯನ್ನು ಹೋಗಲಾಡಿಸುವುದು.
- ಗ್ರಾಮೀಣ ಪ್ರದೇಶದಲ್ಲಿರುವ ಒಣ ಶೌಚಾಲಯಗಳನ್ನು (ನೀರಿನ ಸಂಪರ್ಕವಿಲ್ಲದ ಶೌಚಾಲಯಗಳನ್ನು) ನೀರನ್ನು ಉಪಯೋಗಿಸುವ ಶೌಚಾಲಯಗಳಾಗಿ ಪರಿವರ್ತಿಸಿ, ಕೈಗಳಿಂದ ಮಲ ವಿಲೇವಾರಿ ಮಾಡುವ ಕೆಟ್ಟ ಪದ್ಧತಿಯನ್ನು ನಿರ್ಮೂಲನೆ ಮಾಡುವುದು.

## ಕಾರ್ಯವಿಧಾನ

6 ಜನರ ಬೇಡಿಕೆಯನ್ನು ಕೇಂದ್ರವಾಗಿಟ್ಟುಕೊಂಡು ಸಮುದಾಯದ ನೇತೃತ್ವದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸುವುದು ಇಲ್ಲಿನ ಕಾರ್ಯವಿಧಾನವಾಗಿದೆ. "ಬೇಡಿಕೆ ಆಧಾರಿತ" ಮಾರ್ಗವನ್ನು ಅನುಸರಿಸಿ, ಅರಿವು ಮೂಡಿಸುವುದರ ಮೂಲಕ ಮನೆಯ ಮಟ್ಟದಲ್ಲಿ, ಶಾಲಾ ಮಟ್ಟದಲ್ಲಿ ನೈರ್ಮಲ್ಯದ ಅಗತ್ಯತೆ ಹಾಗೂ ಸ್ವಚ್ಛ ಪರಿಸರದ ಬಗ್ಗೆ ಒತ್ತು ನೀಡುವುದಾಗಿದೆ. ಸಮುದಾಯದ ಅಗತ್ಯಗಳನ್ನು ಪೂರೈಸಲು ಪರ್ಯಾಯ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ. ಅತೀ ಬಡತನದ ಕುಟುಂಬಗಳು ವೈಯಕ್ತಿಕ ಶೌಚಾಲಯಗಳನ್ನು ಕಟ್ಟಿಸಿಕೊಂಡಲ್ಲಿ ಸಹಾಯಧನದ ಬದಲಾಗಿ ಪ್ರೋತ್ಸಾಹ ಧನ ನೀಡಲಾಗುತ್ತದೆ. ಗ್ರಾಮೀಣ ಜನರಲ್ಲಿ ನೈರ್ಮಲ್ಯದ ಅರಿವು ಮೂಡಿಸಲು ಶಾಲಾ ಶೌಚಾಲಯ ನಿರ್ಮಾಣ ಪ್ರಮುಖ ಚಟುವಟಿಕೆಯಾಗಿದೆ. ಗ್ರಾಹಕರ ಆಯ್ಕೆಯಂತೆ/ ಇಚ್ಛೆಯಂತೆ ತಾಂತ್ರಿಕತೆಯ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು, ಸಹಕಾರ ಸಂಸ್ಥೆಗಳು, ಮಹಿಳಾ ಸಂಘಗಳು, ಸ್ವ ಸಹಾಯ ಸಂಘಗಳು, ಸರ್ಕಾರೇತರ ಸಂಘ ಸಂಸ್ಥೆಗಳು ಇತ್ಯಾದಿಗಳನ್ನು ಸೇರಿಸಿಕೊಂಡು ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ಪ್ರದೇಶಕ್ಕನುಗುಣವಾಗಿ ರೂಪಿಸುವುದು ಈ ಕಾರ್ಯ ತಂತ್ರದ ಪ್ರಮುಖ ಘಟಕವಾಗಿರುತ್ತದೆ. ಗ್ರಾಮೀಣ ಜನರ ನೈರ್ಮಲ್ಯ ಮತ್ತು ಶುಚಿತ್ವದ ಅಭ್ಯಾಸದಲ್ಲಿ ಸುಧಾರಣೆ, ನೈರ್ಮಲ್ಯ ವಿಷಯಕ್ಕೆ ಸಂಬಂಧಿಸಿದಂತೆ ಅವರ ಮನೋಭಾವದಲ್ಲಿ ಬದಲಾವಣೆ ತರುವುದು ಮತ್ತು ಅವರ ಆರ್ಥಿಕ ಅಗತ್ಯಕ್ಕೆ ತಕ್ಕಂತೆ ವಿಭಿನ್ನ ಮಾದರಿಯ ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವುದು ಈ ಯೋಜನೆಯ ಪ್ರಧಾನ ಕಾರ್ಯವಿಧಾನ.

## ಅನುಷ್ಠಾನ:

7 ಸಂಪೂರ್ಣ ನೈರ್ಮಲ್ಯ ಆಂದೋಲನವನ್ನು ಯೋಜನೆಯ ರೀತಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಯೋಜನೆಯ ಪ್ರಸ್ತಾವನೆಯನ್ನು ರೂಪಿಸಿ ರಾಜ್ಯ ಸರ್ಕಾರಕ್ಕೆ ಸಲ್ಲಿಸುವುದು, ರಾಜ್ಯ ಸರ್ಕಾರವು ಅದನ್ನು ಪರಿಶೀಲಿಸಿ ಕೇಂದ್ರ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಸಚಿವಾಲಯದ ಕುಡಿಯುವ ನೀರು ಸರಬರಾಜು ಇಲಾಖೆಗೆ ಸಲ್ಲಿಸುತ್ತದೆ. ಸಂಪೂರ್ಣ ನೈರ್ಮಲ್ಯ ಆಂದೋಲನವು ಪ್ರಾರಂಭಿಕ ಚಟುವಟಿಕೆಗಳೊಂದಿಗೆ ವಿವಿಧ ಹಂತಗಳಲ್ಲಿ ಅನುಷ್ಠಾನಕ್ಕೆ ಬರುತ್ತದೆ. ಆರಂಭದಲ್ಲಿ ಪ್ರಾಥಮಿಕ ಮಾಹಿತಿ ನೀಡಲು, ಅರಿವು ಮೂಡಿಸಲು, ಶಿಕ್ಷಣ ಮತ್ತು ಸಂವಹನ ಕಾರ್ಯಕ್ಕೆ ಅನುದಾನವನ್ನು ಒದಗಿಸಲಾಗಿದೆ. ನಂತರದ ಭೌತಿಕ ಅನುಷ್ಠಾನ ಹಂತದಲ್ಲಿ ಮನೆ ಮನೆಯ ಶೌಚಾಲಯ ನಿರ್ಮಾಣದ ಬೇಡಿಕೆಗಳನ್ನು ಪೂರೈಸಲು ವೈವಿಧ್ಯಮಯ ಮಾದರಿಗಳನ್ನು ಮತ್ತು ತಂತ್ರಜ್ಞಾನವನ್ನು ಒದಗಿಸಲಾಗುತ್ತದೆ. ಇದರಲ್ಲಿ ಪ್ರತಿ ಕುಂಟುಂಬದವರು ಅವರ ಅಗತ್ಯಕ್ಕೆ ಅನುಗುಣವಾಗಿ ಕೌಟುಂಬಿಕ ಶೌಚಾಲಯದ ಮಾದರಿಗಳನ್ನು ಆರಿಸಿಕೊಳ್ಳಬಹುದು. ಇಲ್ಲಿ ಒದಗಿಸುವ ಮಾದರಿಗಳು ಬಡ ಕುಟುಂಬಗಳಿಗೆ ಅವರ ಆರ್ಥಿಕ ಶಕ್ತಿಗೆ ತಕ್ಕಂತೆ ಮುಂದಿನ ದಿನಗಳಲ್ಲಿ ಮತ್ತಷ್ಟು ಸುಧಾರಣೆ ಮಾಡಲು ಅವಕಾಶಗಳನ್ನು ನೀಡುತ್ತದೆ.

ಈ ಆಂದೋಲನವು ಒಂದು ಹಂತದಲ್ಲಿ ಗ್ರಾಮೀಣ ಜನರ ನೈರ್ಮಲ್ಯ ಮತ್ತು ಶುಚಿತ್ವ ಅಭ್ಯಾಸದಲ್ಲಿ ಸುಧಾರಣೆ ತರಲು ಹಾಗೂ ಅವರ ಮನೋಭಾವದಲ್ಲಿ ಬದಲಾವಣೆ ತರಲು ಪಂಚಾಯತ್ ರಾಜ್ ಸಂಸ್ಥೆಗಳು, ಸಹಕಾರ ಸಂಸ್ಥೆಗಳು, ಮಹಿಳಾ ಸಂಘಗಳು, ಸ್ವ ಸಹಾಯ ಸಂಘಗಳು, ಸರ್ಕಾರೇತರ ಸಂಘ ಸಂಸ್ಥೆಗಳ ಜೊತೆಯಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ಪ್ರದೇಶಕ್ಕನುಗುಣವಾಗಿ ರೂಪಿಸುತ್ತದೆ ಹಾಗೂ ಮತ್ತೊಂದು ಹಂತದಲ್ಲಿ ಈ ಪ್ರಚಾರದಿಂದಾಗಿ ಬರುವ ಬೇಡಿಕೆಗಳನ್ನು ಪೂರೈಸಲು ವಿಭಿನ್ನ ಮಾದರಿಯ, ವಿವಿಧ ಶ್ರೇಣಿಯ ನೈರ್ಮಲ್ಯ ಸಾಮಗ್ರಿಗಳನ್ನು, ತಾಂತ್ರಿಕ ಮಾದರಿಗಳನ್ನು ಒದಗಿಸುತ್ತದೆ.

೮ ಜಿಲ್ಲೆಯು ಸಂಪೂರ್ಣ ನೈರ್ಮಲ್ಯ ಆಂದೋಲನದ ಅನುಷ್ಠಾನ ಘಟಕವಾಗಿರುತ್ತದೆ. ಕೇಂದ್ರ ಸರ್ಕಾರದ ಸಹಾಯವನ್ನು ಪಡೆಯಲು ರಾಜ್ಯ / ಕೇಂದ್ರಾಡಳಿತ ಪ್ರದೇಶಗಳು ಕೆಲವು ಆಯ್ದ ಜಿಲ್ಲೆಗಳ ಯೋಜನೆಗಳನ್ನು ರೂಪಿಸಬೇಕು. ಹಾಗೂ ಈ ಯೋಜನೆಗಳಿಗೆ ತಮ್ಮ ಸಹಕಾರವನ್ನು ವ್ಯಕ್ತಪಡಿಸಬೇಕು. ರಾಜ್ಯ / ಕೇಂದ್ರಾಡಳಿತ ಪ್ರದೇಶಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಇತರೆ ಯೋಜನೆಗಳ ಪ್ರಗತಿ ಮತ್ತು ಈ ಯೋಜನೆಗೆ ಮಂಡಿಸಿರುವ ಬೇಡಿಕೆಯ ಆಧಾರದ ಮೇಲೆ ಕೇಂದ್ರ ಸರ್ಕಾರವು ಅನುಮತಿ ನೀಡಬಹುದಾದ ಯೋಜನೆಗಳ ಸಂಖ್ಯೆಯನ್ನು ನಿರ್ಧರಿಸುತ್ತದೆ. ಜಿಲ್ಲೆಗಳ ಆಯ್ಕೆಯನ್ನು ಆಯಾ ರಾಜ್ಯ / ಕೇಂದ್ರಾಡಳಿತ ಪ್ರದೇಶಗಳು ಮಾಡುತ್ತವೆ. ದೇಶದ ಸಂಪೂರ್ಣ ಗ್ರಾಮೀಣ ಪ್ರದೇಶವನ್ನು ಆವರಿಸುವಂತೆ ಯೋಜನಾ ಜಿಲ್ಲೆಗಳ ಸಂಖ್ಯೆಯನ್ನು ಹಂತ ಹಂತವಾಗಿ ಹೆಚ್ಚಿಸಲಾಗುತ್ತದೆ. ಸಂಪೂರ್ಣ ನೈರ್ಮಲ್ಯ ಆಂದೋಲನವನ್ನು ಯೋಜನಾ ಜಿಲ್ಲೆಗಳಲ್ಲಿ 4 ವರ್ಷ ಅಥವಾ ಅದಕ್ಕಿಂತ ಕಡಿಮೆ ಅವಧಿಯಲ್ಲಿ ಅನುಷ್ಠಾನಗೊಳಸಬೇಕೆಂದು ಅಪೇಕ್ಷಿಸಲಾಗಿದೆ.

## ಪ್ರಧಾನ ಅಂಶಗಳು:

೯ ಸಂಪೂರ್ಣ ನೈರ್ಮಲ್ಯ ಆಂದೋಲನದ ಪ್ರಧಾನ ಅಂಶಗಳು ಮತ್ತು ಚಟುವಟಿಕೆಗಳು ಈ ಕೆಳಕಂಡಂತಿರುತ್ತವೆ.

<u>ಅ. ಪ್ರಾರಂಭಿಕ ಚಟುವಟಿಕೆಗಳು:</u>

ಗ್ರಾಮೀಣ ಜನರ ಶುಚಿತ್ವ ಮತ್ತು ನೈರ್ಮಲ್ಯದ ಅಭ್ಯಾಸಗಳು, ಜನರ ಮನೋಭಾವ ಮತ್ತು ಸ್ವಚ್ಛ ಪರಿಸರಕ್ಕಾಗಿ ಇರುವ ಬೇಡಿಕೆ ಇತ್ಯಾದಿಗಳನ್ನು ಗುರುತಿಸಲು ಪ್ರಾಥಮಿಕ ಸಮೀಕ್ಷೆ ನಡೆಸುವುದು; ಈ ಸಮೀಕ್ಷೆ ಆಧರಿಸಿ ಜಿಲ್ಲಾ ಸಂಪೂರ್ಣ ನೈರ್ಮಲ್ಯ ಆಂದೋಲನದ ಪ್ರಸ್ತಾವನೆ ತಯಾರಿಸುವುದು ಹಾಗೂ ನೆರವಿಗಾಗಿ ಕೇಂದ್ರ ಸರ್ಕಾರಕ್ಕೆ ಯೋಜನೆಯನ್ನು ಸಲ್ಲಿಸುವುದು ಪ್ರಾರಂಭಿಕ ಚಟುವಟಿಕೆಯಾಗಿದೆ. ಪ್ರಾರಂಭಿಕ ಚಟುವಟಿಕೆಯು ಪ್ರಾಥಮಿಕ ಸಮೀಕ್ಷೆ(ಬೇಸ್ ಲೈನ್) ನಡೆಸುವುದರೊಂದಿಗೆ, ಸಂಪೂರ್ಣ ನೈರ್ಮಲ್ಯ ಆಂದೋಲನದ ಅನುಷ್ಠಾನ ಯೋಜನೆ ತಯಾರಿಸುವುದನ್ನೂ ಒಳಗೊಂಡಿರುತ್ತದೆ. ಜಿಲ್ಲಾ ಮಟ್ಟದ ಪ್ರಮುಖ ಯೋಜನಾ ಅನುಷ್ಠಾನ ಅಧಿಕಾರಿಗಳ ತರಬೇತಿಯು ಇದರಲ್ಲಿ ಸೇರಿರುತ್ತದೆ. ಪ್ರಾರಂಭಿಕ ಚಟುವಟಿಕೆಗಳಿಗಾಗಿ ತಗಲುವ ಪೂರ್ಣ ಖರ್ಚನ್ನು ಕೇಂದ್ರ ಸರ್ಕಾರವು ಭರಿಸುತ್ತದೆ ಮತ್ತು ಈ ಮೊತ್ತವು ಯೋಜನಾ ಮೊತ್ತದ ಶೇ.5 ಕ್ಕಿಂತ ಹೆಚ್ಚಿರಬಾರದು.

<u>ಆ. ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು</u>

ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು ಯೋಜನೆಯ ಪ್ರಮುಖ ಅಂಶಗಳಾಗಿವೆ. ಇವುಗಳ ಮುಖ್ಯ ಉದ್ದೇಶ ಗ್ರಾಮೀಣ ಪ್ರದೇಶದ ಮನೆಗಳು, ಶಾಲೆಗಳು, ಅಂಗನವಾಡಿ, ಬಾಲವಾಡಿ ಮತ್ತು ಒಟ್ಟು ಸಮುದಾಯದಲ್ಲಿ ನಿರ್ಮಲ ಪರಿಸರದ ಅಗತ್ಯವನ್ನು ಮನವರಿಕೆ ಮಾಡಿಕೊಡುವುದಾಗಿದೆ. ಇದರಡಿಯಲ್ಲಿ ಕೈಗೊಳ್ಳುವ ಎಲ್ಲಾ ಚಟುವಟಿಕೆಗಳು ಆಯಾ ಪ್ರದೇಶಕ್ಕೆ ಅನುಗುಣವಾಗಿ ಇರಬೇಕು. ಮತ್ತು ಎಲ್ಲಾ ವರ್ಗದ ಗ್ರಾಮೀಣ ಜನರೂ ಶೌಚಾಲಯ ನಿರ್ಮಾಣದಲ್ಲಿ ಭಾಗವಹಿಸಲು ಆಸಕ್ತಿ ಹುಟ್ಟಿಸುವಂತಿರಬೇಕು. ಈ ಘಟಕದಡಿಯಲ್ಲಿ ಪ್ರೇರಕರಿಗೆ ಪ್ರೋತ್ಸಾಹ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಪ್ರೋತ್ಸಾಹ ಧನವು ಪ್ರಗತಿಯನ್ನು ಆಧರಿಸಿರುತ್ತದೆ. ಉದಾ: ಎಷ್ಟು ಮನೆ, ಶಾಲೆ/ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಿಸಲು ಹಾಗೂ ನಂತರ ಅವುಗಳನ್ನು ಉಪಯೋಗಿಸಲು ಪ್ರೇರೇಪಣೆ ನೀಡಿರುತ್ತಾರೆ ಎನ್ನುವುದನ್ನು ಅವಲಂಬಿಸಿರುತ್ತದೆ. ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು ಆರೋಗ್ಯ ಮತ್ತು ಶುಚಿತ್ವ ಅಭ್ಯಾಸಗಳು ಹಾಗೂ ಪರಿಸರ ನೈರ್ಮಲ್ಯ ವಿಷಯಗಳಿಗೆ ಹೆಚ್ಚು ಒತ್ತು ನೀಡಬೇಕು. ಆಯಾ ಗ್ರಾಮ ಪಂಚಾಯತಿಯಲ್ಲಿ ಹಮ್ಮಿಕೊಂಡ ಚಟುವಟಿಕೆಗಳ ವಿವರಗಳನ್ನು ಸಮುದಾಯ ಕಟ್ಟಡದ ಗೋಡೆಗಳ ಮೇಲೆ ಗೋಡೆ ಬರಹದ ಮೂಲಕ ಪ್ರತಿಬಿಂಬಿಸಬೇಕು.

ಆಕಾಶವಾಣಿ / ದೂರದರ್ಶನ ಮತ್ತು ಕೇಬಲ್ ದೂರದರ್ಶನಗಳ ಮೂಲಕ ಪ್ರಚಾರ ಮಾಡಿ ನಿರ್ಮಲ ಪರಿಸರಕ್ಕಾಗಿ ಬೇಡಿಕೆ ಸೃಷ್ಟಿಸಬೇಕು. ಈ ಘಟಕದ ಮೊತ್ತವು ಯೋಜನಾ ಮೊತ್ತದ ಶೇ.15ಕ್ಕಿಂತ ಕಡಿಮೆ ಇರಬಾರದು. ಈ ಘಟಕದ

ಅನುದಾನವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು 80:20 ಅನುಪಾತದಲ್ಲಿ ಭರಿಸುತ್ತವೆ. ಪ್ರತಿಯೊಂದು ಯೋಜನಾ ಜಿಲ್ಲೆಯೂ ಎಲ್ಲಾ ವರ್ಗದ ಜನರನ್ನು ತಲುಪುವಂತೆ ಕಾರ್ಯ ತಂತ್ರಗಳನ್ನು ರೂಪಿಸಿ ವಿವರವಾದ ಮಾಹಿತಿ ಶಿಕ್ಷಣ ಮತ್ತು ಸಂವಹನ ಕ್ರಿಯಾ ಯೋಜನೆಯನ್ನು ತಯಾರಿಸಬೇಕು. ಗ್ರಾಮೀಣ ಜನರ ಜೀವನದಲ್ಲಿ ಶುಚಿತ್ವದ ಮನೋಭಾವವನ್ನು ಹಾಸುಹೊಕ್ಕಾಗಿಸಲು ಪ್ರೇರೇಪಿಸುವುದು ಮತ್ತು ಈ ಯೋಜನೆಯಡಿಯಲ್ಲಿ ನಿರ್ಮಿಸಿದ ಎಲ್ಲಾ ಸೌಲಭ್ಯಗಳನ್ನು ನಿರ್ವಹಣೆ ಮಾಡಲು ಹಾಗೂ ಅಭಿವೃದ್ಧಿಪಡಿಸಲು ಉತ್ತೇಜಿಸುವುದು ಈ ಸಂವಹನ ಯೋಜನೆಯ ಮುಖ್ಯ ಗುರಿ.

ಈ ಘಟಕದಲ್ಲಿ ಲಭ್ಯವಿರುವ ಅನುದಾನವನ್ನು ಸಮುದಾಯಕ್ಕೆ ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ಶುಚಿತ್ವ ಶಿಕ್ಷಣ ನೀಡಲು ಬಳಸಬಹುದು.

<u>ಇ. ಗ್ರಾಮೀಣ ನೈರ್ಮಲ್ಯ ಮಳಿಗೆಗಳು ಮತ್ತು ಉತ್ಪಾದನಾ ಕೇಂದ್ರಗಳು</u>

ಶೌಚಾಲಯ ನಿರ್ಮಾಣಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸುವುದು ಮತ್ತು ಜನರ, ಕುಟುಂಬಗಳ ಹಾಗೂ ಪರಿಸರದ ನೈರ್ಮಲ್ಯ ಸೌಲಭ್ಯಗಳ ಇತರೆ ಅಗತ್ಯಗಳನ್ನು ಪೂರೈಸಲು ಗ್ರಾಮೀಣ ನೈರ್ಮಲ್ಯ ಮಳಿಗೆಗಳನ್ನು ಸ್ಥಾಪಿಸಬೇಕು. ಗ್ರಾಮೀಣ ನೈರ್ಮಲ್ಯ ಮಳಿಗೆಯು ಸಂಪೂರ್ಣ ನೈರ್ಮಲ್ಯಕ್ಕೆ ಬೇಕಾಗಿರುವ ಎಲ್ಲಾ ಸಾಮಗ್ರಿಗಳನ್ನು ಹೊಂದಿರಬೇಕು. ಇದು 'ಸಾಮಾಜಿಕ ಉದ್ದೇಶದ ವ್ಯಾಪಾರಿ ಮಳಿಗೆ'ಯಾಗಿರಬೇಕು. ಗ್ರಾಮೀಣ ನೈರ್ಮಲ್ಯ ಮಳಿಗೆಯ ಪ್ರಮುಖ ಗುರಿಯು ಆಯಾ ಪ್ರದೇಶಕ್ಕೆ ಅನುಗುಣವಾದ, ವಿವಿಧ ತಂತ್ರಜ್ಞಾನದ, ಬೇರೆ ಬೇರೆ ದರದ ಶೌಚಾಲಯ ಮತ್ತು ನೈರ್ಮಲ್ಯ ಸೌಲಭ್ಯಗಳ ಮಾದರಿಗಳನ್ನು, ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಹಾಗೂ ಸಲಹೆಗಳನ್ನು ಒದಗಿಸುವುದಾಗಿದೆ. ಬಡ ಜನರಿಗೆ ಕೈಗೆಟಕುವ ದರದಲ್ಲಿ ನೈರ್ಮಲ್ಯ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಉತ್ಪಾದನಾ ಕೇಂದ್ರಗಳ ಕೆಲಸ. ಗ್ರಾಮೀಣ ನೈರ್ಮಲ್ಯ ಮಳಿಗೆ ಮತ್ತು ಉತ್ಪಾದನಾ ಕೇಂದ್ರಗಳನ್ನು ಯಾವುದೇ ಸರ್ಕಾರೇತರ ಸಂಘ ಸಂಸ್ಥೆ / ಸ್ವ ಸಹಾಯ ಸಂಘ / ಮಹಿಳಾ ಸಂಸ್ಥೆ / ಗ್ರಾಮ ಪಂಚಾಯಿತಿಗಳು ನಡೆಸಬಹುದು. ಈ ಕಾರ್ಯಕ್ಕಾಗಿ ಯೋಜನಾ ಮೊತ್ತದ ಶೇ.5ಕ್ಕಿಂತ ಕಡಿಮೆ (ಗರಿಷ್ಠ ರೂ.35.00 ಲಕ್ಷ) ಮೊತ್ತವನ್ನು ನಿಗಧಿಪಡಿಸಲಾಗಿದೆ. ಈ ಘಟಕದ ಅನುದಾನವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು 80:20 ಅನುಪಾತದಲ್ಲಿ ಭರಿಸುತ್ತವೆ. ಪ್ರತಿ ಒಂದು ಗ್ರಾಮೀಣ ನೈರ್ಮಲ್ಯ ಮಳಿಗೆ ಮತ್ತು ಉತ್ಪಾದನಾ ಕೇಂದ್ರ ಸ್ಥಾಪಿಸಲು ಗರಿಷ್ಠ ರೂ.3.5 ಲಕ್ಷಗಳನ್ನು ನೀಡಬಹುದು. ಈ ಅನುದಾನವನ್ನು ಯಾವುದೇ ಸರ್ಕಾರೇತರ ಸಂಘ ಸಂಸ್ಥೆ / ಸ್ವ ಸಹಾಯ ಸಂಘ / ಮಹಿಳಾ ಸಂಸ್ಥೆ / ಗ್ರಾಮ ಪಂಚಾಯಿತಿಗಳಿಗೆ ನೀಡಬಹುದು. ಈ ಅನುದಾನವನ್ನು ಕಟ್ಟಡ ನಿರ್ಮಾಣ, ಕೆಲಸಗಾರರ ತರಬೇತಿ ಮತ್ತು ಸುತ್ತು ನಿಧಿ ರೂಪದಲ್ಲಿ ನೀಡಬಹುದು. ಗ್ರಾಮೀಣ ನೈರ್ಮಲ್ಯ ಮಳಿಗೆ ಮತ್ತು ಉತ್ಪಾದನಾ ಕೇಂದ್ರವು ಸುಸ್ಥಿರ ಹಂತವನ್ನು ತಲುಪಿದ ನಂತರ ಸುತ್ತು ನಿಧಿಯನ್ನು ಜಿಲ್ಲಾ ಅನುಷ್ಠಾನ ಸಂಸ್ಥೆಗೆ ಹಿಂದಿರುಗಿಸಬೇಕು. ಗ್ರಾಮೀಣ ನೈರ್ಮಲ್ಯ ಮಳಿಗೆ ಮತ್ತು ಉತ್ಪಾದನಾ ಕೇಂದ್ರದ ವ್ಯವಸ್ಥಾಪಕರಿಗೆ ತರಬೇತಿ ನೀಡಲು ಪ್ರಮುಖ ತರಬೇತಿ ಸಂಸ್ಥೆ / ಸಂಪನ್ಮೂಲ ವ್ಯಕ್ತಿಗಳನ್ನು ಜಿಲ್ಲಾ ಅನುಷ್ಠಾನ ಸಂಸ್ಥೆಯು ಗುರುತಿಸತಕ್ಕದ್ದು. ಈ ಯೋಜನೆಯ ಉದ್ದೇಶಗಳಿಗೆ ಅನುಗುಣವಾಗಿ ಗ್ರಾಮೀಣ ನೈರ್ಮಲ್ಯ ಮಳಿಗೆ ಮತ್ತು ಉತ್ಪಾದನಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಜಂಟಿ ಮೇಲ್ವಿಚಾರಣೆ ವ್ಯವಸ್ಥೆಯನ್ನು ಮತ್ತು ಸೂಕ್ತ ಒಪ್ಪಂದವನ್ನು ಮಾಡಿಕೊಳ್ಳಬೇಕು.

<u>ಈ. ವೈಯಕ್ತಿಕ ಗೃಹ ಶೌಚಾಲಯ ನಿರ್ಮಾಣ</u>

ಕಡಿಮೆ ಮೊತ್ತದಲ್ಲಿ ನಿರ್ಮಿಸಲಾದ, ಮೇಲ್ಕಟ್ಟಡವಿಲ್ಲದ, ಪೂರ್ಣಗೊಂಡ ಒಂದು ಗೃಹ ಶೌಚಾಲಯವು ಈ ಯೋಜನೆಯ ಮೂಲ ಘಟಕವಾಗಿರುತ್ತದೆ. ಈ ಮೂಲ ಘಟಕವು ಮೂಲಭೂತವಾಗಿ ಗುಂಡಿ, ಶೌಚ ಬೇಸಿನ್, ಪೈಪ್ ಸಂಪರ್ಕ ಮತ್ತು ನೆಲಹಾಸನ್ನು ಹೊಂದಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿರುವ ಎಲ್ಲಾ ಒಣ ಶೌಚಾಲಯಗಳನ್ನು ನೀರು ಬಳಸುವ ಶೌಚಾಲಯವಾಗಿ ಪರಿವರ್ತಿಸುವುದು ಹಾಗೂ ಎಲ್ಲ ಗ್ರಾಮೀಣ ಕುಟುಂಬಗಳಲ್ಲಿ ಶೌಚಾಲಯ ಇರುವಂತೆ ಮಾಡುವುದು ಈ ಯೋಜನೆಯ ಗುರಿಯಾಗಿದೆ. ಸಮುದಾಯದ ಪೂರ್ಣ ಭಾಗವಹಿಸುವಿಕೆಯ ದೃಷ್ಟಿಯಿಂದ ಈ ಯೋಜನೆಯಡಿಯಲ್ಲಿ ಬರುವ ಪ್ರೋತ್ಸಾಹ ಧನವನ್ನು ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ವಿಸ್ತರಿಸಬಹುದು. ಗೃಹ ಶೌಚಾಲಯವನ್ನು ಆಯಾ ಕುಟುಂಬಗಳಿಂದಲೇ ನಿರ್ಮಿಸತಕ್ಕದ್ದು. ನಿರ್ಮಾಣ ಕಾರ್ಯ ಮುಗಿದು ಶೌಚಾಲಯವನ್ನು ಬಳಕೆ ಮಾಡುತ್ತಿದ್ದಲ್ಲಿ ಅವರ ಸಾಧನೆಯನ್ನು ಗುರುತಿಸುವ ನಿಟ್ಟಿನಲ್ಲಿ ಪ್ರೋತ್ಸಾಹ ಧನವನ್ನು ನೀಡಬಹುದು. ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹ ಧನವೂ ಸೇರಿದಂತೆ ಇರುವ ಆರ್ಥಿಕ ನೆರವಿನ ಮಾದರಿ ಈ ಕೆಳಗಿನಂತಿದೆ.

| ಕಡಿಮೆ ವೆಚ್ಚದ ಶೌಚಾಲಯ ಘಟಕ ಒಂದಕ್ಕೆ (ರೂಗಳಲ್ಲಿ) | ಕೊಡುಗೆ | | | | | |
|---|---|---|---|---|---|---|
| | ಭಾರತ ಸರ್ಕಾರ | | ರಾಜ್ಯ ಸರ್ಕಾರ | | ಕೌಟುಂಬಿಕ ಕೊಡುಗೆ | |
| | ಬಿ.ಪಿ.ಎಲ್. | ಎ.ಪಿ.ಎಲ್ | ಬಿ.ಪಿ.ಎಲ್. | ಎ.ಪಿ.ಎಲ್ | ಬಿ.ಪಿ.ಎಲ್. | ಎ.ಪಿ.ಎಲ್ |
| 625 ರೂ.ವರೆಗೆ (ಒಂದು ತೊಟ್ಟಿ) | 60% | ಇಲ್ಲ | 20% | ಇಲ್ಲ | 20% | 100% |
| 625 ರೂ.ಗಳಿಂದ 1000 ರೂಗಳವರೆಗೆ | 30% | ಇಲ್ಲ | 30% | ಇಲ್ಲ | 40% | 100% |
| 1000 ರೂ.ಗಳಿಗೂ ಮೇಲ್ಪಟ್ಟು | ಇಲ್ಲ | ಇಲ್ಲ | ಇಲ್ಲ | ಇಲ್ಲ | 100% | 100% |

ಕೇಂದ್ರ ಸರ್ಕಾರದ ಪ್ರೋತ್ಸಾಹ ಧನವು ಕಡಿಮೆ ವೆಚ್ಚದ ಶೌಚಾಲಯದ ಮೂಲ ಘಟಕದ ಮೊತ್ತಕ್ಕೆ ಅನುಗುಣವಾಗಿರುತ್ತದೆ ಮತ್ತು ಯಾವುದೇ ಕಾರಣಕ್ಕೂ ಈ ಪ್ರೋತ್ಸಾಹ ಧನವು ಮೇಲ್ಕಂಡ ಪಟ್ಟಿಯಲ್ಲಿ ತಿಳಿಸಿರುವ ಅರ್ಹ ಮೊತ್ತಕ್ಕಿಂತ ಹೆಚ್ಚಿರುವುದಿಲ್ಲ.

ಬಡತನದ ರೇಖೆಗಿಂತ ಮೇಲ್ಪಟ್ಟ ಕುಟುಂಬಗಳು ಪ್ರೇರೇಪಣೆಯ ಮೂಲಕ, ಪ್ರೋತ್ಸಾಹ ಧನವಿಲ್ಲದೆ, ತಮ್ಮ ತಮ್ಮ ಗೃಹ ಶೌಚಾಲಯಗಳನ್ನು ತಾವೇ ಕಟ್ಟಿಸಿಕೊಳ್ಳುತ್ತವೆ ಎಂದು ಊಹಿಸಲಾಗಿದೆ. ಆದರೆ, ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳು, ಯಾವುದೇ ತಾರತಮ್ಯವಿಲ್ಲದೆ ಆ ಜಿಲ್ಲೆಯಲ್ಲಿನ ಎಲ್ಲ ಕುಟುಂಬಗಳನ್ನೂ ತಲುಪಬೇಕು.

ಗ್ರಾಮೀಣ ಪ್ರದೇಶದಲ್ಲಿ ಒಣ ಶೌಚಾಲಯ (ನೀರಿನ ಸಂಪರ್ಕವಿಲ್ಲದ ಶೌಚಾಲಯಗಳನ್ನು) ಕಟ್ಟಿಸುವುದನ್ನು ನಿಷೇಧಿಸಲಾಗಿದೆ. ಹಾಗೂ ಈಗಾಗಲೇ ಇರುವ ಒಣಶೌಚಾಲಯಗಳನ್ನು ನೀರನ್ನು ಸುರಿದು ಉಪಯೋಗಿಸುವ ಶೌಚಾಲಯಗಳಾಗಿ ಪರಿವರ್ತಿಬೇಕು ಮತ್ತು ಈ ಬಗೆಯ ಘಟಕಗಳ ವೆಚ್ಚವನ್ನು, ಹೊಸ ಗೃಹ ಶೌಚಾಲಯ ನಿರ್ಮಾಣ ವೆಚ್ಚದ ಪಾಲಿನ ರೀತಿಯಲ್ಲೇ ಭರಿಸಬೇಕು.

ಉ. ಸಮುದಾಯ ಶೌಚಾಲಯ ಸಮುಚ್ಚಯ

ಸಮುದಾಯ ಶೌಚಾಲಯ ಸಮುಚ್ಚಯಗಳು, ಸಂಪೂರ್ಣ ನೈರ್ಮಲ್ಯ ಆಂದೋಲನದ ಒಂದು ಮುಖ್ಯ ಘಟಕವಾಗಿದೆ. ಈ ಸಮುಚ್ಚಯಗಳನ್ನು ಭೂರಹಿತ ಸಮುದಾಯ(ಗಂಡಸರು/ಹೆಂಗಸರು)ದ ಒಪ್ಪಿಗೆಯಂತೆ, ಬಳಸಲು ಅನುಕೂಲವಾದ ಜಾಗದಲ್ಲಿ ಕಟ್ಟಿಸಬೇಕು. ಈ ಬಗೆಯ ಸಮುಚ್ಚಯಗಳ ಉಸ್ತುವಾರಿ ಮತ್ತು ನಿರ್ವಹಣೆ ಅತಿ ಮುಖ್ಯ ಮತ್ತು ಇದರ ಸಂಪೂರ್ಣ ಜವಾಬ್ದಾರಿಯನ್ನು ಗ್ರಾಮ ಪಂಚಾಯತಿಯು ವಹಿಸಿಕೊಳ್ಳಬೇಕು ಅಥವಾ ಗ್ರಾಮ ಮಟ್ಟದಲ್ಲಿ ಈ ಜವಾಬ್ದಾರಿಯನ್ನು ನಿರ್ವಹಿಸಲು ಇತರೆ ಏರ್ಪಾಟು ಮಾಡಬೇಕು. ಪ್ರತಿ ಸಮುದಾಯ ಶೌಚಾಲಯ ಸಮುಚ್ಚಯದ ನಿರ್ಮಾಣಕ್ಕೆ ನಿಗಧಿ ಮಾಡಲಾದ ಗರಿಷ್ಠ ಮೊತ್ತ 2.00 ಲಕ್ಷ ರೂಪಾಯಿಗಳು. ಈ ನಿರ್ಧಿಷ್ಟ ಯೋಜನೆಯನ್ನು ವಿವರವಾದ ವಿನ್ಯಾಸ ಮತ್ತು ಖರ್ಚುವೆಚ್ಚ ಮಾಹಿತಿಯ ಆಧಾರದ ಮೇಲೆ ರಾಷ್ಟ್ರೀಯ ಯೋಜನಾ ಮಂಜೂರಾತಿ ಸಮಿತಿ (ಎನ್.ಎಸ್.ಎಸ್.ಸಿ.) ಯು ಅಂಗೀಕರಿಸಿ ಮಂಜೂರು ಮಾಡಬೇಕು. ಈ ವೆಚ್ಚವನ್ನು ಕೇಂದ್ರ, ಸರ್ಕಾರ, ರಾಜ್ಯ ಸರ್ಕಾರ ಮತ್ತು ಗ್ರಾಮ ಸಮುದಾಯಗಳು 60:20:20 ಅನುಪಾತದಲ್ಲಿ ಹಂಚಿಕೊಳ್ಳುತ್ತವೆ. ಸಮುದಾಯದ ಕೊಡುಗೆಯನ್ನು ಗ್ರಾಮ ಪಂಚಾಯತಿಯು ಭರಿಸಬಹುದು. ಸಮುದಾಯ ಶೌಚಾಲಯ ಸಮುಚ್ಚಯ ನಿರ್ಮಾಣ ಯೋಜನೆಯ ವೆಚ್ಚಕ್ಕೆ ಯಾವುದೇ ಗರಿಷ್ಠ ಮಿತಿ ಇಲ್ಲ. ಆದರೂ, ಸಮುದಾಯ ಶೌಚಾಲಯ ಸಮುಚ್ಚಯ ಮತ್ತು ಗೃಹ ಶೌಚಾಲಯಗಳ ನಿರ್ಮಾಣದ ಒಟ್ಟು ಖರ್ಚುವೆಚ್ಚಗಳು ಸರ್ಕಾರ ಈ ಯೋಜನೆಗೆ ಮೀಸಲಿಟ್ಟ ಒಟ್ಟು ಮೊತ್ತದ ಶೇ.60ಕ್ಕಿಂತಲೂ ಹೆಚ್ಚಾಗಬಾರದು. ಹಳ್ಳಿಯಲ್ಲಿ ಪ್ರತ್ಯೇಕ ಗೃಹ ಶೌಚಾಲಯಗಳನ್ನು ಕಟ್ಟಿಸಲು ಜಾಗದ ಅನುಕೂಲ ಇಲ್ಲದಿದ್ದಲ್ಲಿ ಹಾಗೂ ಸಮುಚ್ಚಯಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಡೆಸಲು ಸಮುದಾಯವು ಜವಾಬ್ದಾರಿ ತೆಗೆದುಕೊಳ್ಳಲು ಸಿದ್ಧವಿದ್ದಲ್ಲಿ ಮಾತ್ರ ಈ ಸಮುದಾಯ ಶೌಚಾಲಯಗಳನ್ನು ಕಟ್ಟಿಸಬೇಕು. ಈ ಯೋಜನೆಯ ಮೂಲ ಉದ್ದೇಶವು ಹೆಚ್ಚಿನ ಸಂಖ್ಯೆಯ ಪ್ರತ್ಯೇಕ ಗೃಹ ಶೌಚಾಲಯಗಳನ್ನು ನಿರ್ಮಾಣ ಮಾಡುವುದಾಗಿದೆ. ಎಲ್ಲಿ ಪ್ರತ್ಯೇಕ ಗೃಹ ಶೌಚಾಲಯಗಳನ್ನು ಕಟ್ಟಿಸಲು ಸಾಧ್ಯವಿಲ್ಲವೋ ಅಲ್ಲಿ ಮಾತ್ರ ಸಮುದಾಯ ಶೌಚಾಲಯ ಸಮುಚ್ಚಯಗಳನ್ನು ಕಟ್ಟಿಸಲು ನಿಗಧಿಪಡಿಸಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಜನ ಸಮುದಾಯಕ್ಕೆ ಶುಚಿತ್ವದ ಅಭ್ಯಾಸಗಳನ್ನು, ನೈರ್ಮಲ್ಯದ ನಡವಳಿಕೆಗಳನ್ನು ಕಲಿಸುವುದಾಗಿದೆ. ಅಲ್ಲದೇ ಸಮುದಾಯ ಶೌಚಾಲಯ ಸಮುಚ್ಚಯಗಳನ್ನು ಸಾರ್ವಜನಿಕರು ಹೆಚ್ಚಿನ ಸಂಖ್ಯೆಗಳಲ್ಲಿ ಸೇರುವ ಸ್ಥಳಗಳಲ್ಲಿ, ಸಂತೆ ನಡೆಯುವ ಸ್ಥಳಗಳಲ್ಲಿ ಕಟ್ಟಿಸಬಹುದಾಗಿದೆ.

## ಊ. ಶಾಲಾ ನೈರ್ಮಲ್ಯ ಮತ್ತು ಶುಚಿತ್ವ ಶಿಕ್ಷಣ

ಮಕ್ಕಳು ಯಾವಾಗಲೂ ಹೊಸದನ್ನು ಕಲಿಯಲು ಮತ್ತು ಸ್ವೀಕರಿಸಲು ಉತ್ಸುಕರಾಗಿರುತ್ತಾರೆ. ಹೀಗಾಗಿ ಶಾಲೆ ಮತ್ತು ಅಂಗನವಾಡಿಗಳು ನೈರ್ಮಲ್ಯ ಮತ್ತು ಸ್ವಚ್ಛತೆಯ ಕುರಿತು ಮಕ್ಕಳ ಮನೋಭಾವವನ್ನು ರೂಪಿಸಲು ಸೂಕ್ತವಾದ ತಾಣಗಳು. ಮಕ್ಕಳನ್ನು ಪ್ರೇರೇಪಿಸುವ ಮೂಲಕ ಬಯಲಲ್ಲಿ ಮಲಮೂತ್ರ ವಿಸರ್ಜನೆಯನ್ನು ತಡೆಗಟ್ಟಿ ಶೌಚಾಲಯ ಬಳಕೆಯನ್ನು ಉತ್ತೇಜಿಸಬಹುದು. ಮಕ್ಕಳು ಶಾಲೆಯಲ್ಲಿ ಶೌಚಾಲಯ ಬಳಸುವ ಅನುಭವವನ್ನು ಮತ್ತು ಶಿಕ್ಷಕರ ಮೂಲಕ ನೈರ್ಮಲ್ಯ ಅಭ್ಯಾಸಗಳನ್ನು ರೂಢಿಸಿಕೊಂಡಲ್ಲಿ, ಈ ಅಭ್ಯಾಸ ಮನೆಮನೆಗಳನ್ನು ತಲುಪುವಲ್ಲಿ ತಡವಾಗುವುದಿಲ್ಲ, ಮಕ್ಕಳು ತಮ್ಮ ಪೋಷಕರೂ ಈ ನಿರ್ಮಲ ಅಭ್ಯಾಸಗಳನ್ನು ರೂಢಿಸಿಕೊಳ್ಳುವಂತೆ ಪ್ರೇರೇಪಿಸುತ್ತಾರೆ. ಆದ್ದರಿಂದ, ಯಾವುದೇ ಸಂಪೂರ್ಣ ನೈರ್ಮಲ್ಯ ಆಂದೋಲನದಲ್ಲಿ, ಶಾಲಾ ನೈರ್ಮಲ್ಯ ಒಂದು ಅವಿಭಾಜ್ಯ ಅಂಗ. ಎಲ್ಲ ಬಗೆಯ ಸರ್ಕಾರೀ ಶಾಲೆಗಳಲ್ಲೂ ಅಂದರೆ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹಾಗೂ ಅಂಗನವಾಡಿಗಳಲ್ಲಿ, ಶೌಚಾಲಯಗಳನ್ನು ಕಟ್ಟಿಸಬೇಕು, ಹೆಣ್ಣುಮಕ್ಕಳ ಶೌಚಾಲಯ ನಿರ್ಮಾಣದ ಕಡೆ ಹೆಚ್ಚಿನ ಗಮನ ನೀಡಬೇಕು. ಇದಕ್ಕಾಗಿ 20,000/- ರೂಪಾಯಿ ವೆಚ್ಚದ ಒಂದು ಘಟಕಕ್ಕೆ ಕೇಂದ್ರ ಸರ್ಕಾರವು 12,000/- ರೂ.ಗಳ ಸಹಾಯ ಧನವನ್ನು ನೀಡುತ್ತದೆ. ಶಾಲೆಗಳಲ್ಲಿ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚ ಘಟಕಗಳನ್ನು ಕಟ್ಟಿಸಬೇಕು ಮತ್ತು ಇವನ್ನು ಪ್ರತ್ಯೇಕ ಘಟಕಗಳೆಂದೇ ಪರಿಗಣಿಸಿ, ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರದ ರೂ. 12,000/- ಸಹಾಯಧನವನ್ನು ಕೊಡಲಾಗುತ್ತದೆ. ಸಂಪೂರ್ಣ ನೈರ್ಮಲ್ಯ ಆಂದೋಲನದ ಶಾಲಾ ನೈರ್ಮಲ್ಯ ಕಾರ್ಯಕ್ರಮಕ್ಕೆ ಸಹಾಯಧನವನ್ನು 60:30:10 ಅನುಪಾತದಲ್ಲಿ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಶಿಕ್ಷಕ–ಪೋಷಕರ ಸಮುದಾಯಗಳು ಭರಿಸುತ್ತವೆ. ಶಿಕ್ಷಕ–ಪೋಷಕರ ಸಮುದಾಯದ ಪಾಲಿಗೆ, ಗ್ರಾಮ ಪಂಚಾಯತಿಯೂ ಸಹ ಕೊಡುಗೆ ಕೊಡಬಹುದು. ಇದಕ್ಕಿಂತ ಹೆಚ್ಚಿನ ಮೊತ್ತದ ಶಾಲಾ ಶೌಚಾಲಯ ನಿರ್ಮಿಸಬೇಕಾದಲ್ಲಿ ರಾಜ್ಯ/ಕೇಂದ್ರಾಡಳಿತ ಸರ್ಕಾರಗಳು, ಶಿಕ್ಷಕ–ಪೋಷಕರ ಸಮುದಾಯ ಮತ್ತು ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಸಂಪನ್ಮೂಲಗಳಿಂದ ಭರಿಸಲು ಸ್ವತಂತ್ರವಾಗಿವೆ.

ಶಾಲೆಗಳಲ್ಲಿ ಶೌಚಾಲಯ ಕಟ್ಟಡ ನಿರ್ಮಾಣವಲ್ಲದೆ, ಮಕ್ಕಳಿಗೆ ಎಲ್ಲ ಬಗೆಯ ನೈರ್ಮಲ್ಯ ತಿಳುವಳಿಕೆ ಮತ್ತು ಶುಚಿತ್ವ ಶಿಕ್ಷಣವನ್ನು ನೀಡುವುದು ಬಹಳ ಮುಖ್ಯ. ಈ ಉದ್ದೇಶಕ್ಕಾಗಿ ಪ್ರತೀ ಶಾಲೆಯಲ್ಲಿ ಕನಿಷ್ಟ ಒಬ್ಬ ಶಿಕ್ಷಕರಿಗಾದರೂ ನೈರ್ಮಲ್ಯ ಶಿಕ್ಷಣದಲ್ಲಿ ತರಬೇತಿ ಕೊಡಬೇಕು ಮತ್ತು ಈ ಶಿಕ್ಷಕರು, ಆಸಕ್ತಿದಾಯಕವಾದ ಚಟುವಟಿಕೆಗಳ ಮೂಲಕ, ಸಾಮುದಾಯಿಕ ಕಾರ್ಯಕ್ರಮಗಳ ಮೂಲಕ, ಮಕ್ಕಳ ನೈರ್ಮಲ್ಯ ಅಭ್ಯಾಸಗಳನ್ನು, ಸ್ವಚ್ಛತೆಯ ನಡವಳಿಕೆಗಳನ್ನು ತಿದ್ದಿ ಬೆಳೆಸಬೇಕು. ಈ ಕುರಿತಾದ ಖರ್ಚನ್ನು ಮಾಹಿತಿ, ಶಿಕ್ಷಣ ಮತ್ತು ಸಂವಹನಕ್ಕಾಗಿ ಮೀಸಲಿಟ್ಟಿರುವ ನಿಧಿಯ ಮೂಲಕ ಭರಿಸಬೇಕು.

ಅಂಗನವಾಡಿ ಶೌಚಾಲಯಗಳು:

ಮಕ್ಕಳ ಬೆಳವಣಿಗೆಯ ಪ್ರಾಥಮಿಕ ಹಂತದಲ್ಲೇ ಅವರ ನೈರ್ಮಲ್ಯ ಅಭ್ಯಾಸಗಳನ್ನು ತಿದ್ದಲು ಅಂಗನವಾಡಿಗಳನ್ನು ಒಂದು ಮುಖ್ಯ ವೇದಿಕೆಯಾಗಿ ಬಳಸಿಕೊಳ್ಳಬೇಕು. ಅಂಗನವಾಡಿಗಳು ಪುಟ್ಟ ಮಕ್ಕಳ ಮತ್ತು ಅವರ ಅಮ್ಮಂದಿರ ನಡವಳಿಕೆ ಮತ್ತು ಮನೋಭಾವವನ್ನು ತಿದ್ದಲು ಸಹಾಯ ಮಾಡುತ್ತವೆ. ಈ ಉದ್ದೇಶಕ್ಕಾಗಿ ಪ್ರತೀ ಅಂಗನವಾಡಿಗೂ, ಪುಟ್ಟ ಮಕ್ಕಳು ಬಳಸಲು ಅನುಕೂಲವಾಗುವಂತಹ, ಇಷ್ಟ ಪಡುವಂತಹ ಶೌಚಾಲಯವನ್ನು ಕಟ್ಟಿಸಿಕೊಡಬೇಕು. ಗ್ರಾಮೀಣ ಪ್ರದೇಶದ ಪ್ರತೀ ಅಂಗನವಾಡಿಗೂ ರೂ. **5000/-** ದವರೆಗಿನ ಒಂದು ಶೌಚಾಲಯವನ್ನು ಕಟ್ಟಿಸಿಕೊಡಬೇಕು ಮತ್ತು ಈ ರೂ.**5000/-** ದಲ್ಲಿ, ಭಾರತ ಸರ್ಕಾರದ ಪ್ರೋತ್ಸಾಹ ಧನ ರೂ. **3000/-** ಮಾತ್ರ. ಉಳಿದ ಹಣವನ್ನು ರಾಜ್ಯ ಸರ್ಕಾರ ಅಥವಾ ಗ್ರಾಮ ಪಂಚಾಯತಿಯು ಕೊಡಬೇಕು. ಈಗ ಬಹಳಷ್ಟು ಅಂಗನವಾಡಿಗಳನ್ನು ಖಾಸಗಿ ಮನೆಗಳಲ್ಲಿ ನಡೆಸುತ್ತಿರುವುದರಿಂದ ಈ ಕೆಳಗಿನ ಕಾರ್ಯವಿಧಾನಗಳನ್ನು ಉಪಯೋಗಿಸಬಹುದು.

- ಯಾವ ಅಂಗನವಾಡಿಗಳು ಸರ್ಕಾರಿ ಕಟ್ಟಡಗಳಲ್ಲಿವೆಯೋ ಅಲ್ಲಿ ಪುಟ್ಟ ಮಕ್ಕಳು ಬಳಸಲು ಅನುಕೂಲವಾಗುವಂತಹ ಶೌಚಾಲಯಗಳನ್ನು ಸಂಪೂರ್ಣ ನೈರ್ಮಲ್ಯ ಆಂದೋಲನದ ನಿಧಿಯಿಂದ (ಮೇಲೆ ತಿಳಿಸಿದ ಅನುಪಾತದಲ್ಲಿ) ಕಟ್ಟಿಸಿಕೊಡಬೇಕು.
- ಖಾಸಗಿ ಕಟ್ಟಡಗಳಲ್ಲಿ ಅಂಗನವಾಡಿಗಳನ್ನು ನಡೆಸುತ್ತಿದ್ದಲ್ಲಿ, ಪುಟ್ಟ ಮಕ್ಕಳು ಬಳಸಲು ಅನುಕೂಲವಾಗುವಂತಹ ನಿಗಧಿತ ವಿನ್ಯಾಸದ ಶೌಚಾಲಯವನ್ನು ಕಟ್ಟಿಸುವಂತೆ ಆ ಕಟ್ಟಡದ ಮಾಲೀಕರನ್ನು ಕೇಳಬೇಕು. ಮಾಲೀಕರು ಈ ನಿರ್ಮಾಣದ ವೆಚ್ಚವನ್ನು ಸರಿದೂಗಿಸಲು, ಬಾಡಿಗೆಯನ್ನು ಹೆಚ್ಚಿಸಬಹುದು. ಅಥವಾ ಸಂಪೂರ್ಣ ನೈರ್ಮಲ್ಯ ಆಂದೋಲನದ ನಿಧಿಯಿಂದ (ಮೇಲೆ ತಿಳಿಸಿದ ಅನುಪಾತದಲ್ಲಿ) ಕಟ್ಟಿಸಿಕೊಟ್ಟು ನಂತರ ಈ ಪ್ರಮಾಣದ ಹಣವನ್ನು ನಿಯಮಿತವಾಗಿ ಬಾಡಿಗೆಯಲ್ಲಿ ವಜಾ ಮಾಡಿಕೊಳ್ಳಬೇಕು.
- ಅಂಗನವಾಡಿಗಳಿಗಾಗಿ ಹೊಸ ಕಟ್ಟಡವನ್ನು ತೆಗೆದುಕೊಳ್ಳುವುದಿದ್ದರೆ, ಪುಟ್ಟ ಮಕ್ಕಳು ಬಳಸಲು ಅನುಕೂಲವಾದ ಶೌಚಾಲಯಗಳು ಇರುವಂತಹ ಕಟ್ಟಡಗಳನ್ನು ಮಾತ್ರವೇ ತೆಗೆದುಕೊಳ್ಳಬೇಕು. ಸಂಪೂರ್ಣ

ನೈರ್ಮಲ್ಯ ಆಂದೋಲನ ನಿಧಿಯ ಶೇ.10ಕ್ಕಿಂತ ಹೆಚ್ಚಿನ ಮೊತ್ತವನ್ನು ಶಾಲಾ ಮತ್ತು ಅಂಗನವಾಡಿ ಶೌಚಾಲಯಗಳಿಗಾಗಿ ಉಪಯೋಗಿಸಬಹುದು.

### ಜಿ. ಆಡಳಿತಾತ್ಮಕ ವೆಚ್ಚಗಳು

ತರಬೇತಿಗಳ ವೆಚ್ಚ, ಯೋಜನೆಯ ಅವಧಿಗೆ ನೇಮಕ ಮಾಡಿಕೊಳ್ಳುವ ತಾತ್ಕಾಲಿಕ ಸಿಬ್ಬಂದಿಯ ಸಂಬಳ, ಪೂರಕ ಸೇವೆಗಳ ವೆಚ್ಚ, ಇಂಧನ ವೆಚ್ಚ, ವಾಹನಗಳ ಬಾಡಿಗೆ ವೆಚ್ಚ, ಕಾಗದ ಪತ್ರಗಳ ವೆಚ್ಚ, ಸಂಪೂರ್ಣ ನೈರ್ಮಲ್ಯ ಆಂದೋಲನದ ಉಸ್ತುವಾರಿ ಮತ್ತು ಪರಿಶೀಲನೆಯ ವೆಚ್ಚ ಇವುಗಳು ಆಡಳಿತಾತ್ಮಕ ವೆಚ್ಚಗಳ ಅಡಿಯಲ್ಲಿ ಬರುತ್ತವೆ. ಆದರೆ ಈ ಯೋಜನೆಗಳಿಗಾಗಿ ಯಾವುದೇ ಶಾಶ್ವತ ಹುದ್ದೆಯನ್ನೂ ಸೃಷ್ಟಿಸುವಂತಿಲ್ಲ, ಅಲ್ಲದೆ ಯಾವುದೇ ವಾಹನವನ್ನೂ ಯೋಜನೆಯ ಅನುಷ್ಠಾನದ ಸಲುವಾಗಿ ಖರೀದಿಸುವಂತಿಲ್ಲ. ಆದರೆ ಯೋಜನೆಯನ್ನು ಸಮರ್ಪಕವಾಗಿ ಕಾರ್ಯಗತಗೊಳಿಸಲು, ಸಂಪರ್ಕ–ಸಂವಹನ, ಮಾನವ ಸಂಪನ್ಮೂಲ ಅಭಿವೃದ್ಧಿ, ಶಾಲಾ ನೈರ್ಮಲ್ಯ ಮತ್ತು ಶುಚಿತ್ವ ಶಿಕ್ಷಣ, ಪರಿಶೀಲನೆ/ಸಮೀಕ್ಷೆ ಈ ಕ್ಷೇತ್ರಗಳಲ್ಲಿ ಪರಿಣಿತರಾದ ವೃತ್ತಿಪರ ಸಲಹೆಗಾರರನ್ನು ಯೋಜನಾ ಅವಧಿಗೆ ತೆಗೆದುಕೊಳ್ಳಬಹುದು. ಈ ವೃತ್ತಿಪರರ ಶುಲ್ಕವನ್ನು ಆಡಳಿತ ವೆಚ್ಚದಿಂದ ಕೊಡಬಹುದು. ಆಡಳಿತ ವೆಚ್ಚವನ್ನು ವಾಹನಗಳ ಖರೀದಿಗೆ ಬಳಸುವಂತಿಲ್ಲ. ಈ ಕುರಿತು ವೆಚ್ಚ ಮಾಡಬಹುದಾದ ಮತ್ತು ಮಾಡಬಾರದ ಅಂಶಗಳ ಪಟ್ಟಿಯನ್ನು ಮಾರ್ಚ್ 4, 2003ರಂದು ಹೊರಡಿಸಲಾದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ - W-11013/4/2000-CRSP ರಲ್ಲಿ ತಿಳಿಸಲಾಗಿರುತ್ತದೆ . ಇದರ ಪ್ರತಿಯನ್ನು ಅಡಕ 11ರಲ್ಲಿ ನೀಡಲಾಗಿದೆ. ಈ ಪಟ್ಟಿಯನ್ನು ಚಾಚೂ ತಪ್ಪದೆ ಪಾಲಿಸತಕ್ಕದ್ದು. ಪ್ರತೀ ಜಿಲ್ಲೆಗೂ ಒಂದು ಕಂಪ್ಯೂಟರ್ (ಎಲ್ಲ ಅಗತ್ಯ ಸಲಕರಣೆಗಳೊಂದಿಗೆ) ಖರೀದಿಸಲು ಅನುಮತಿ ನೀಡಲಾಗಿದೆ.

### ರಾಷ್ಟ್ರೀಯ ಯೋಜನಾ ಮಂಜೂರಾತಿ ಸಮಿತಿ:

10 ರಾಜ್ಯ ಸರ್ಕಾರ ಮತ್ತು ಕೇಂದ್ರಾಡಳಿತ ಸರ್ಕಾರಗಳ ಮೂಲಕ ಆಯ್ಕೆ ಮಾಡಿ ಕಳುಹಿಸಲ್ಪಟ್ಟ ಜಿಲ್ಲಾವಾರು ಯೋಜನೆಗಳ ಪ್ರಸ್ತಾವನೆಯನ್ನು ಮಂಜೂರು ಮಾಡಲು ರಾಷ್ಟ್ರೀಯ ಯೋಜನಾ ಮಂಜೂರಾತಿ ಸಮಿತಿ(ಎನ್.ಎಸ್.ಎಸ್.ಸಿ. ನ್ಯಾಷನಲ್ ಸ್ಕೀಮ್ ಸ್ಯಾಂಕ್ಷನಿಂಗ್ ಕಮಿಟಿ)ಯನ್ನು ರಚಿಸಲಾಗಿದೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಕುಡಿಯುವ ನೀರು ಪೂರೈಕೆ ವಿಭಾಗದ ಕಾರ್ಯದರ್ಶಿಗಳು ಈ ಎನ್.ಎಸ್.ಎಸ್.ಸಿ.ಯ ಅಧ್ಯಕ್ಷರಾಗಿರುತ್ತಾರೆ. ಎನ್.ಎಸ್.ಎಸ್.ಸಿ.ಯಲ್ಲಿ ಆರು ಜನ ಸದಸ್ಯರಿರುತ್ತಾರೆ. ಇದರಲ್ಲಿ ಇಬ್ಬರು ಸದಸ್ಯರು ಭಾರತ ಸರ್ಕಾರದ ಅಧಿಕೃತ ಅಧಿಕಾರಿಗಳಾಗಿರುತ್ತಾರೆ. (ಹೆಚ್ಚುವರಿ ಕಾರ್ಯದರ್ಶಿಗಳು ಮತ್ತು ಹಣಕಾಸು ಸಲಹೆಗಾರರು; ಮತ್ತು ಜಂಟಿ ಕಾರ್ಯದರ್ಶಿಗಳು (ತಾಂತ್ರಿಕ ಆಯೋಗ) ಇಂತಹವರು) ಉಳಿದ ನಾಲ್ಕು ಸದಸ್ಯರು ಗ್ರಾಮೀಣ ನೈರ್ಮಲ್ಯ ಕ್ಷೇತ್ರದ ಪರಿಣಿತರಾಗಿದ್ದು, ಸರ್ಕಾರೇತರ ಸದಸ್ಯರಾಗಿರುತ್ತಾರೆ.

### ವಿಶೇಷ ಅವಕಾಶಗಳು

11 ನೈರ್ಮಲ್ಯ ಯೋಜನೆಗಳಿಗಾಗಿ ಜಿಲ್ಲಾ ಘಟಕಗಳನ್ನು, ಹಳ್ಳಿಗಳನ್ನು ಆರಿಸುವಾಗ ಮತ್ತು ಶೌಚಾಲಯಗಳಿಗೆ ಇರುವ ಬೇಡಿಕೆಯನ್ನು ಪೂರೈಸುವಾಗ ಸಮಾಜದ ದುರ್ಬಲ ವರ್ಗ ಮತ್ತು ಅನಾನುಕೂಲವಿರುವ ವರ್ಗಗಳಿಗೆ, ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು. ಗೃಹ ಶೌಚಾಲಯ ನಿರ್ಮಾಣಕ್ಕಾಗಿ ಕೊಡುವ ಒಟ್ಟು ಪ್ರೋತ್ಸಾಹಧನದಲ್ಲಿ ಕನಿಷ್ಟ ಶೇ.25ರಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಗೃಹ ಶೌಚಾಲಯ ನಿರ್ಮಾಣಕ್ಕೆ ಕೊಡಬೇಕು.

12 ಇದಲ್ಲದೆ, ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳ ಗೃಹ ಶೌಚಾಲಯಕ್ಕಾಗಿ ಮೀಸಲಿಟ್ಟ ಪ್ರೋತ್ಸಾಹ ಧನದಲ್ಲಿ ಶೇಕಡಾ 3ರಷ್ಟನ್ನು ಅಂಗವಿಕಲರು ಇರುವ ಕುಟುಂಬಗಳ ಗೃಹ ಶೌಚಾಲಯಗಳಿಗಾಗಿ ತೆಗೆದಿರಿಸಬೇಕು. ಜೊತೆಗೆ ಶಾಲೆಗಳಲ್ಲಿ ಹಾಗೂ ಸಂಸ್ಥೆಗಳಲ್ಲಿ ಶೌಚಾಲಯಗಳನ್ನು ಕಟ್ಟಿಸುವಾಗ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಅಂಗವಿಕಲ ಮಕ್ಕಳು ಅಥವಾ ವ್ಯಕ್ತಿಗಳು ಬಳಸಲು ಅನುಕೂಲವಾಗುವಂತೆ ಕಟ್ಟಿಸಬೇಕು.

### ಅನುಷ್ಠಾನಗೊಳಿಸುವ ಸಂಸ್ಥೆಗಳು

13 ಸಂಪೂರ್ಣ ನೈರ್ಮಲ್ಯ ಆಂದೋಲನವನ್ನು ಕಾರ್ಯಗತಗೊಳಿಸಲು ದೊಡ್ಡ ಮಟ್ಟದ ಸಮುದಾಯದ ಪಾಲ್ಗೊಳ್ಳುವಿಕೆ ಬೇಕಾಗುತ್ತದೆ. ಆದ್ದರಿಂದ, ಜಿಲ್ಲಾ ಮಟ್ಟದಲ್ಲಿ ಅದರ ಅನುಷ್ಠಾನವನ್ನು ಜಿಲ್ಲಾ ಪಂಚಾಯತಿಗೆ

ವಹಿಸಲಾಗಿದೆ. ಆದರೆ ಜಿಲ್ಲಾ ಪಂಚಾಯತಿ ಇಲ್ಲದೆ ಇದ್ದಲ್ಲಿ, ಜಿಲ್ಲಾ ನೀರು ಮತ್ತು ನೈರ್ಮಲ್ಯ ನಿಯೋಗ ಯೋಜನೆಯನ್ನು ಅನುಷ್ಟಾನಗೊಳಿಸಬೇಕು. ಹಾಗೂ ಸಂಪೂರ್ಣ ನೈರ್ಮಲ್ಯ ಆಂದೋಲನ ಮತ್ತು ಸ್ವಜಲಧಾರಾ ಯೋಜನೆಗಳನ್ನು ಈ ಸಂಸ್ಥೆಯ ಮೂಲಕವೇ ಅನುಷ್ಟಾನಗೊಳಿಸಬೇಕು. ಸಂಬಂಧ ಪಟ್ಟ ಎಲ್ಲಾ ಇಲಾಖೆಗಳು ಯೋಜನೆಯ ಅನುಷ್ಟಾನದಲ್ಲಿ ವೇಗವರ್ಧಕ ಪಾತ್ರ ವಹಿಸುತ್ತವೆ.

14 ರಾಜ್ಯ ಮಟ್ಟದಲ್ಲಿ ಸಂಪೂರ್ಣ ನೈರ್ಮಲ್ಯ ಆಂದೋಲನದ ಜಿಲ್ಲಾ ಯೋಜನೆಗಳನ್ನು ಪರಿಶೀಲಿಸಲು, ಮೇಲುಸ್ತುವಾರಿ ನಡೆಸಲು ಮತ್ತು ಸಮರ್ಪಕ ಅನುಷ್ಠಾನಕ್ಕೆ ಸಹಕರಿಸಲು ಒಂದು ಸೂಕ್ತ ಸಾಂಸ್ಥಿಕ ವ್ಯವಸ್ಥೆಯನ್ನು ರಾಜ್ಯ ಸರ್ಕಾರವು ಮಾಡಬೇಕು. ಯಾವ ರಾಜ್ಯಗಳಲ್ಲಿ ನೀರು ಪೂರೈಕೆ ಮತ್ತು ನೈರ್ಮಲ್ಯ ಈ ಎರಡನ್ನೂ ಬೇರೆ ಬೇರೆ ವಿಭಾಗಗಳು ನಿರ್ವಹಿಸುತ್ತಿವೆಯೋ ಅಲ್ಲಿ ಬೇರೆಯದೇ ಒಂದು ಸಂಸ್ಥೆ ರಚನೆ ಮಾಡಿ, ನೀರು ಪೂರೈಕೆ ವಿಭಾಗದ ಅಧಿಕಾರಿಗಳು ಈ ಸಂಸ್ಥೆಯಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳುವಂತೆ ಖಾತ್ರಿ ಪಡಿಸಬೇಕು. ಸಮೂಹ ಸಂಪರ್ಕ ಮತ್ತು ಸಂವಹನ, ಮಾನವ ಸಂಪನ್ಮೂಲ ಅಭಿವೃದ್ಧಿ, ಶಾಲಾ ನೈರ್ಮಲ್ಯ ಮತ್ತು ಸ್ವಚ್ಛತಾ ಶಿಕ್ಷಣ, ಪರಿಶೀಲನೆ–ಈ ಕ್ಷೇತ್ರಗಳಲ್ಲಿ ಪರಿಣಿತರಾದ ವೃತ್ತಿಪರ ಸಲಹೆಗಾರರ ಸೇವೆಯನ್ನು ರಾಜ್ಯ ಮಟ್ಟದಲ್ಲಿ ಪಡೆಯಬಹುದು. ಈ ಖರ್ಚು ವೆಚ್ಚವನ್ನು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮಾನವ ಸಂಪನ್ಮೂಲ ನಿಧಿಯಿಂದ 75:25 ಅನುಪಾತದಲ್ಲಿ ಭರಿಸಬಹುದು. ಹೀಗೆಯೇ ಇಡೀ ರಾಜ್ಯಕ್ಕೆ ಸಾಮಾನ್ಯವಾದ ಮಾಹಿತಿ, ಶಿಕ್ಷಣ ಮತ್ತು ಸಂವಹನ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿಯ ಚಟುವಟಿಕೆಗಳನ್ನು, ರಾಜ್ಯಮಟ್ಟದಲ್ಲಿ ಕೈಗೆತ್ತಿಕೊಳ್ಳಬಹುದು ಮತ್ತು ಇದಕ್ಕಾಗಿ ನಿಯಮಿತವಾದ 75:25 ಅನುಪಾತದ ಪಾಲುದಾರಿಕೆ ವಿಧಾನದಲ್ಲಿ ನಿಧಿಯನ್ನು ಬಳಸಬಹುದು. ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಈ ಯೋಜನೆಗಾಗಿ ಒಂದು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯಬೇಕು.

## ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ

15 ಸಂವಿಧಾನದ 73ನೇ ತಿದ್ದುಪಡಿ ಕಾಯಿದೆ, 1992ರ ಪ್ರಕಾರ, ನೈರ್ಮಲ್ಯ ವಿಷಯವನ್ನು 11ನೇ ಪರಿಚ್ಛೇದದಲ್ಲಿ ಸೇರಿಸಲಾಗಿದೆ. ಇದರ ಪ್ರಕಾರ, ಗ್ರಾಮ ಪಂಚಾಯತಿಯು ಸಂಪೂರ್ಣ ನೈರ್ಮಲ್ಯ ಆಂದೋಲನದ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ಹೊಂದಿರುತ್ತದೆ. ಸಂಪೂರ್ಣ ನೈರ್ಮಲ್ಯ ಆಂದೋಲನವನ್ನು ಎಲ್ಲಾ ಹಂತದ ಪಂಚಾಯತ್ ರಾಜ್ ಸಂಸ್ಥೆಗಳೂ ಅನುಷ್ಠಾನಗೊಳಿಸಬೇಕು. ಈ ಸಂಸ್ಥೆಗಳು, ನೈರ್ಮಲ್ಯ ಸೌಲಭ್ಯಗಳ ನಿರ್ಮಾಣದಲ್ಲಿ ಜನ ಸಮುದಾಯವು ಪಾಲ್ಗೊಳ್ಳುವಂತೆ ಮಾಡುತ್ತವೆ ಮತ್ತು ಕಸದ ಸೂಕ್ತ ವಿಲೇವಾರಿ (ಘನ ಮತ್ತು ದ್ರವ) ಮಾಡಿ, ಪರಿಸರವನ್ನು ಸ್ವಚ್ಛವಾಗಿಡಲು ಸಹಕರಿಸುತ್ತವೆ. ಸಂಪೂರ್ಣ ನೈರ್ಮಲ್ಯ ಆಂದೋಲನದಲ್ಲಿ ಕಟ್ಟಿಸುವ ಸಮುದಾಯ ಶೌಚಾಲಯಗಳ ನಿರ್ವಹಣೆ ಮತ್ತು ಉಸ್ತುವಾರಿಯನ್ನು ಪಂಚಾಯತ್/ಸ್ವಸಹಾಯ/ಸೇವಾ ಸಂಸ್ಥೆಗಳೇ ನೋಡಿಕೊಳ್ಳಬೇಕು. ಮೇಲೆ ತಿಳಿಸಿದ ಶಾಲಾ ನೈರ್ಮಲ್ಯ ಕಾರ್ಯಕ್ರಮಕ್ಕೆ ಪಂಚಾಯತಿಯು ತನ್ನ ಸಂಗ್ರಹದಲ್ಲಿರುವ ಯಾವುದೇ ನಿಧಿಯನ್ನು ಕೊಡುಗೆಯಾಗಿ ಕೊಡಬಹುದು ಅಥವಾ ಸಮುದಾಯದಿಂದ ಸಂಗ್ರಹಿಸಿ ಕೊಡಬಹುದು. ಸಂಪೂರ್ಣ ನೈರ್ಮಲ್ಯ ಆಂದೋಲನದಲ್ಲಿ ಕಟ್ಟಿಸಲಾದ ಸಮುದಾಯ ಶೌಚಾಲಯಗಳು, ಅದರ ಸುತ್ತಲಿನ ಇತರೆ ಸಲಕರಣೆಗಳು, ಚರಂಡಿಗಳು ಇತ್ಯಾದಿಗಳ ಹೊಣೆಗಾರಿಕೆಯನ್ನು ಪಂಚಾಯತ್ ಸಂಸ್ಥೆಗಳು ನಿರ್ವಹಿಸುತ್ತವೆ. ಪಂಚಾಯತಿಗಳು ನಿರ್ಮಿತಿ ಕೇಂದ್ರ/ ನೈರ್ಮಲ್ಯ ಸಲಕರಣೆಗಳ ಮಾರಾಟ ಕೇಂದ್ರಗಳಾಗಿಯೂ ಕೆಲಸ ನಿರ್ವಹಿಸಬಹುದಾಗಿದೆ.

## ಸರ್ಕಾರೇತರ ಸಂಸ್ಥೆಗಳ (ಎನ್.ಜಿ.ಒ.ಗಳ) ಪಾತ್ರ

16 ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಪ್ರದೇಶದಲ್ಲಿ, ಸಂಪೂರ್ಣ ನೈರ್ಮಲ್ಯ ಆಂದೋಲನ ಕಾರ್ಯಕ್ರಮ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯದಲ್ಲಿ ಮತ್ತು ಕಾಮಗಾರಿಗಳ ವಿಷಯದಲ್ಲಿ ಅವು ಸಕ್ರಿಯವಾಗಿ ಭಾಗವಹಿಸಬೇಕಾಗುತ್ತದೆ. ಗ್ರಾಮೀಣ ಜನ ಸಮುದಾಯದಲ್ಲಿ ನೈರ್ಮಲ್ಯ ಅಭ್ಯಾಸಗಳ ಬಗ್ಗೆ ಅರಿವು ಮೂಡಿಸಿ, ಅವರ ಮನೋಭಾವದಲ್ಲಿ ಉತ್ತಮ ಬದಲಾವಣೆಯನ್ನು ತರುವ ಕೆಲಸದ ಜೊತೆಗೆ ಈ ಸರ್ಕಾರೇತರ ಸಂಸ್ಥೆಗಳು ಆ ಜನ ಸಮುದಾಯವು ಶೌಚಾಲಯವನ್ನು ಯಾವಾಗಲೂ ಬಳಸುವಂತೆ, ಸಮರ್ಪಕವಾಗಿ ಉಪಯೋಗಿಸುವಂತೆ ನೋಡಿಕೊಳ್ಳಬೇಕು. ಸರ್ಕಾರೇತರ ಸಂಸ್ಥೆಗಳು ಸಹ ನಿರ್ಮಿತಿ ಕೇಂದ್ರ/ ನೈರ್ಮಲ್ಯ ಸಲಕರಣೆಗಳ ಮಾರಾಟ ಕೇಂದ್ರಗಳನ್ನು ನಡೆಸಬಹುದು. ನೈರ್ಮಲ್ಯ, ಸ್ವಚ್ಚತೆ, ಆರೋಗ್ಯ, ನೀರಿನ ಬಳಕೆ ಇತ್ಯಾದಿಗಳ ಬಗ್ಗೆ ಜನರ ತಿಳುವಳಿಕೆ ಮತ್ತು ಅಭ್ಯಾಸಗಳನ್ನು ತಿಳಿದುಕೊಳ್ಳಲು ನಡೆಸುವ ಪೂರ್ವಭಾವಿ ಸಮೀಕ್ಷೆಯಲ್ಲಿ ಮತ್ತು ಪಿ.ಆರ್.ಎ.ಗಳನ್ನು ಆಯೋಜಿಸಲು ಕೂಡಾ ಸರ್ಕಾರೇತರ ಸಂಸ್ಥೆಗಳನ್ನು ಉಪಯೋಗಿಸಿಕೊಳ್ಳಬಹುದು. ಈ ಸರ್ಕಾರೇತರ ಸಂಸ್ಥೆಗಳ ಆಯ್ಕೆಯನ್ನು ಪಾರದರ್ಶಕ ರೀತಿಯಲ್ಲಿ ನಡೆಸಬೇಕು.

## ಯೋಜನೆ ಅನುದಾನ

17 ಸಂಪೂರ್ಣ ನೈರ್ಮಲ್ಯ ಆಂದೋಲನ ಯೋಜನೆಯ ವಿವಿಧ ಘಟಕಗಳಿಗೆ ಲಭ್ಯವಿರುವ ಶೇಕಡಾವಾರು ಅನುದಾನ ಅನುಪಾತಗಳನ್ನು ಈ ಕೆಳಗಿನ ಟೇಬಲ್‌ನಲ್ಲಿ (ಕೋಷ್ಟಕ) ಕೊಡಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ಬಳಕೆದಾರರು ಅನುಕ್ರಮವಾಗಿ ಈ ಬಗೆಯಲ್ಲಿ ಕೊಡುಗೆ ನೀಡುತ್ತಾರೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ರಾಜ್ಯದ ಪಾಲನ್ನು ಭಾರತ ಸರ್ಕಾರವೇ ನೀಡುತ್ತದೆ.

**ಘಟಕಗಳ ಪ್ರಕಾರ ಸಂಪೂರ್ಣ ನೈರ್ಮಲ್ಯ ಆಂದೋಲನದ ಅನುದಾನ ಹಂಚಿಕೆ ವಿವರ**

| ಕ್ರ ಸಂ | ಘಟಕಗಳು | ಟಿ.ಎಸ್.ಸಿ.ಯ ಅನುಪಾತದಲ್ಲಿ ಮೀಸಲಿಟ್ಟ ಮೊತ್ತ | ಕೊಡುಗೆಯ ಶೇಕಡಾ ಪ್ರಮಾಣ | | |
|---|---|---|---|---|---|
| | | | ಭಾರತ ಸರ್ಕಾರ | ರಾಜ್ಯ ಸರ್ಕಾರ | ಬಳಕೆದಾರ/ರ ಸಮುದಾಯದ ಕೊಡುಗೆ |
| a | ಪ್ರಾರಂಭಿಕ ಚಟುವಟಿಕೆಗಳು (ಸಮೀಕ್ಷೆ/ಪ್ರಚಾರ ಇತ್ಯಾದಿ) | 5% ಕ್ಕಿಂತ ಕಡಿಮೆ (ಪ್ರತೀ ಜಿಲ್ಲೆಗೂ ಗರಿಷ್ಟ ರೂ. 20.00 ಲಕ್ಷದಂತೆ) | 100 | 0 | 0 |
| b | ಐ.ಇ.ಸಿ. ಚಟುವಟಿಕೆಗಳು (ಪ್ರೋತ್ಸಾಹ, ಅರಿವು ಮೂಡಿಸುವಿಕೆ, ಶಿಕ್ಷಣ, ತರಬೇತಿ, ಸಲಹೆ ಮತ್ತು ಸಮರ್ಥನೆ) | 15% ಕ್ಕಿಂತ ಹೆಚ್ಚು | 80 | 20 | 0 |
| c | ಬದಲಿ ಸರಬರಾಜು ವ್ಯವಸ್ಥೆ (ಪಂಚಾಯ್ತಿ/ಆರ್.ಎಸ್.ಎಂ) | 5%ಕ್ಕಿಂತ ಹೆಚ್ಚು (ಜಿಲ್ಲೆಗೆ ಗರಿಷ್ಟ ರೂ. 35.00 ಲಕ್ಷದಂತೆ) | 80 | 20 | 0 |
| d | i. ಬಡತನದ ರೇಖೆಗಿಂತ ಕೆಳಗಿರುವ/ ಅಂಗವಿಕಲರಿರುವ ಖಾಸಗಿ ಗೃಹ ಶೌಚಾಲಯಗಳು<br>ii. ಸಮುದಾಯ ನೈರ್ಮಲ್ಯ ಸಮುಚ್ಚಯಗಳು | 60% ಕ್ಕಿಂತ ಕಡಿಮೆ (ಆದೇಶದ ಪ್ಯಾರಾ 9 (ಡಿ) ಪ್ರಕಾರ) | 60 | 20 | 20 |
| e | ಬಡತನದ ರೇಖೆಗಿಂತ ಮೇಲಿರುವ ಕುಟುಂಬಗಳ ಖಾಸಗಿ ಶೌಚಗೃಹಗಳು | ಇಲ್ಲ | 0 | 0 | 100 |
| F | ಅಂಗನವಾಡಿಗಳೂ ಸೇರಿದಂತೆ ಶಾಲಾ ನೈರ್ಮಲ್ಯ ಸೌಲಭ್ಯ [ಕಾಮಗಾರಿ ಮತ್ತು ಸಹಕಾರ ಸೇವೆ] | 10% ಗಿಂತ ಹೆಚ್ಚಾಗಿ | 60 | 30 | 10 |
| g | ಆಡಳಿತ ವೆಚ್ಚಗಳು:- ತರಬೇತಿ, ಸಿಬ್ಬಂದಿ, ಸಹಾಯಕ ಸೇವೆ, ಪರಿವೀಕ್ಷಣೆ, ತಪಾಸಣೆ ಇತ್ಯಾದಿ. | 5% ಕ್ಕಿಂತ ಕಡಿಮೆ (ಜಿಲ್ಲೆಗೆ ರೂ.40.00 ಲಕ್ಷದಂತೆ) | 80 | 20 | 0 |

18 ಸಂಪೂರ್ಣ ನೈರ್ಮಲ್ಯ ಆಂದೋಲನದ ಯಾವುದೇ ಘಟಕದ ಅಡಿಯಲ್ಲಿ ಪಡೆದುಕೊಳ್ಳುವ/ ಉಪಯೋಗಿಸುವ ಅನುದಾನದ ಮೊತ್ತವು, ನಿಗಧಿ ಪಡಿಸಿದ ಅನುದಾನದ ಪ್ರಮಾಣಕ್ಕಿಂತ ಕಡಿಮೆಯಾದ ಸಂದರ್ಭದಲ್ಲಿ ಆ ಉಳಿದ ಹಣವನ್ನು ಗೃಹ ಶೌಚಾಲಯಗಳ ನಿರ್ಮಾಣಕ್ಕೆ ಉಪಯೋಗಿಸಬಹುದು. ಆದರೆ ಯಾವುದೇ ಸಂದರ್ಭದಲ್ಲಿಯೂ ಕೂಡ, ಪ್ರಾರಂಭಿಕ ಚಟುವಟಿಕೆಗಳು ಮತ್ತು ಆಡಳಿತ ವೆಚ್ಚಗಳ ಪ್ರಮಾಣವು ಇಡೀ ಯೋಜನೆಯ ಶೇ.5ನ್ನು ದಾಟುವಂತಿಲ್ಲ.

## ಅನುದಾನ ಬಿಡುಗಡೆ

19 ಅನುಷ್ಠಾನಗೊಳಿಸುವ ಸಂಸ್ಥೆಗಳಿಗೆ ಕೇಂದ್ರದ ಸಹಾಯವನ್ನು ನಾಲ್ಕು ಕಂತುಗಳಲ್ಲಿ (30, 30, 30, 10) ಬಿಡುಗಡೆ ಮಾಡಲಾಗುತ್ತದೆ. ಮೊದಲ ಕಂತನ್ನು, ರಾಷ್ಟ್ರೀಯ ಯೋಜನಾ ಮಂಜೂರಾತಿ ಸಮಿತಿಯು ಯೋಜನಾ ಪ್ರಸ್ತಾವನೆಯನ್ನು ಅಂಗೀಕರಿಸಿ ಅನುಮೋದನೆ ನೀಡಿದ ಕೂಡಲೇ ಬಿಡುಗಡೆ ಮಾಡಲಾಗುತ್ತದೆ ಮತ್ತು ಈ ಬಿಡುಗಡೆ ಜಿಲ್ಲಾ ಮಟ್ಟದ ಅನುಷ್ಠಾನ ಸಂಸ್ಥೆಗಳು ತಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ಕೊಡುವುದರ ಮೇಲೆ ಅವಲಂಬಿತವಾಗಿರುತ್ತದೆ. ಮುಂದಿನ ಕಂತುಗಳ ಬಿಡುಗಡೆ ಈ ಕೆಳಗಿನ ಅಂಶಗಳನ್ನು ಅವಲಂಬಿಸಿರುತ್ತದೆ.

I. ರಾಜ್ಯದ ಪಾಲಿನ ನಿಧಿ ಬಿಡುಗಡೆ : ರಾಜ್ಯದ ಪಾಲಿನ ನಿಧಿಯನ್ನು ಸಂಬಂಧಪಟ್ಟ ಯೋಜನಾ ಜಿಲ್ಲೆಗಳಿಗೆ, ಕೇಂದ್ರದ ನಿಧಿ ವಿತರಣೆಯಾದ 15 ದಿನಗಳೊಳಗಾಗಿ ಅದೇ ಅನುಪಾತದಲ್ಲಿ ಬಿಡುಗಡೆಮಾಡಬೇಕು.

II. ಮನೆಗಳ / ಸಮುದಾಯದ ಕೊಡುಗೆ : ಕಾಮಗಾರಿಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳಲ್ಲಿ (ಬಡತನದ ರೇಖೆಯಿಂದ ಮೇಲ್ಪಟ್ಟ ಕುಟುಂಬಗಳು ಒಳಗೊಂಡಂತೆ) ಸಂಬಂಧಪಟ್ಟ ಕುಟುಂಬ ಅಥವಾ ಸಮುದಾಯದ ವಂತಿಕೆಗಳ ಪೂರ್ಣ ವಿವರಗಳನ್ನು ಯೋಜನೆಯ ಪ್ರಗತಿ ವರದಿಯಲ್ಲಿ ತೋರಿಸಬೇಕು.

III. ಖರ್ಚು ಮತ್ತು ವೆಚ್ಚದ (ವಿನಿಯೋಗದ) ಪ್ರಮಾಣ ಪತ್ರ : ಕೇಂದ್ರದ ಮತ್ತು ರಾಜ್ಯದ ಪಾಲಿನ ಒಟ್ಟು ನಿಧಿಯ (ಅವುಗಳ ಮೇಲಿನ ಬಡ್ಡಿಯೂ ಸೇರಿದಂತೆ) ಕನಿಷ್ಟ ಶೇ.60ರಷ್ಟನ್ನು ಸಮರ್ಪಕವಾಗಿ ಉಪಯೋಗಿಸಿರಬೇಕು. ಕೇಂದ್ರದ ಮತ್ತು ರಾಜ್ಯದ ನಿಧಿಗಳಲ್ಲಿ ಪ್ರತ್ಯೇಕವಾಗಿ ಶೇ.60ಕ್ಕೂ ಹೆಚ್ಚು ಭಾಗವನ್ನು ಉಪಯೋಗಿಸಿರಬೇಕು. ಕೇಂದ್ರದ ಮತ್ತು ರಾಜ್ಯದ ನಿಧಿಗಳ ವಿನಿಯೋಗದ ಬಗ್ಗೆ ಪ್ರತ್ಯೇಕ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ವಿನಿಯೋಗ ಪ್ರಮಾಣ ಪತ್ರವನ್ನು ಯಾವ ವರ್ಷದಲ್ಲಿ ಯೋಜನೆಯು ಮಂಜೂರಾಗಿ ಅನುದಾನ ಬಿಡುಗಡೆಯಾಗಿದೆಯೋ ಆ ಹಣಕಾಸು ವರ್ಷದಿಂದ ಸಲ್ಲಿಸಬೇಕು. ಎಲ್ಲ ವಿನಿಯೋಗ ಪ್ರಮಾಣಪತ್ರಗಳಿಗೂ, ಸಂದರ್ಭಕ್ಕೆ ತಕ್ಕಂತೆ ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ/ ಡಿ.ಆರ್.ಡಿ.ಎ.ಯ ಸರಪಂಚರು ಅಥವಾ ಜಿಲ್ಲಾಧಿಕಾರಿಗಳು ಅಥವಾ ಜಿಲ್ಲಾ ಪರಿಷತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರುಜು ಮಾಡಿರಬೇಕು. (ಅಡಕ 10 ಗಮನಿಸಿ)

IV. ಲೆಕ್ಕಪರಿಶೋಧನಾ ಪ್ರಮಾಣ ಪತ್ರ: ಸಂಪೂರ್ಣ ನೈರ್ಮಲ್ಯ ಆಂದೋಲನದ ಖಾತೆಗಳನ್ನು ವರ್ಷಕ್ಕೊಮ್ಮೆ ಚಾರ್ಟರ್ಡ್ ಅಕೌಂಟೆಂಟರಿಂದ ಆಡಿಟ್ ಮಾಡಿಸಬೇಕು. ಮುಂದಿನ ನಿಧಿಯ ಕಂತುಗಳಿಗಾಗಿ ಪ್ರಸ್ತಾವನೆ ಸಲ್ಲಿಸುವಾಗ, ಹಿಂದಿನ ಹಣಕಾಸು ವರ್ಷದ ಆಡಿಟ್ ವರದಿಗಳನ್ನು ಸಲ್ಲಿಸಬೇಕು. ಈ ವರದಿಗಳಿಗೆ ಸಕಾಲದಲ್ಲಿ ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ/ ಡಿ.ಆರ್.ಡಿ.ಎ.ಯ ಸರಪಂಚರು ಅಥವಾ ಜಿಲ್ಲಾಧಿಕಾರಿಗಳು ಅಥವಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರುಜು ಮಾಡಿರಬೇಕು. ಒಂದೇ ಹಣಕಾಸು ವರ್ಷದಲ್ಲಿ ನಿಧಿಯ ಎರಡು ಕಂತುಗಳಿಗೆ ಪ್ರಸ್ತಾವನೆ ಬಂದಲ್ಲಿ ಆ ಖಾತೆಗಳನ್ನು, ಆ ಹಣಕಾಸು ವರ್ಷದಲ್ಲಿ ಬೇಡಿಕೆ ಬಂದ ಸಮಯಕ್ಕನುಗುಣವಾಗಿ ಪ್ರತ್ಯೇಕಿಸಿ ಆಡಿಟ್ ಮಾಡಿಸಬೇಕು. ಚಾರ್ಟರ್ಡ್ ಅಕೌಂಟೆಂಟರಿಂದ ಬರುವ ಆಡಿಟ್ ವರದಿಗಳು ಅಡಕ 3 ಮತ್ತು 4ರಲ್ಲಿ ತಿಳಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಅಡಕ 5 ರಿಂದ 9ರವರೆಗೆ ತಿಳಿಸಿರುವ ನಮೂನೆಯಲ್ಲಿ ತಯಾರಾಗಿರಬೇಕು.

V. ಸಮ್ಮತಿ ಇರದ ವಸ್ತುಗಳನ್ನು ಖರೀದಿ ಮಾಡದೆ ಇರುವ ಬಗ್ಗೆ ಪ್ರಮಾಣ ಪತ್ರ: ಪತ್ರ ಸಂಖ್ಯೆ: W-11013/4/2000-crsp ದಿನಾಂಕ: 4ನೇ ಮಾರ್ಚ್ 2003ರಲ್ಲಿ ತಿಳಿಸಿರುವಂತೆ ಈ ವಿಭಾಗವು ಸಂಪೂರ್ಣ ನೈರ್ಮಲ್ಯ ಆಂದೋಲನದ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕೆಲವು ನಿಬಂಧನೆಗಳನ್ನು (ಸರಿ ಮತ್ತು ತಪ್ಪು) ನಿಗಧಿಪಡಿಸಿದೆ. (ಅಡಕ 11 ಗಮನಿಸಿ). ಸಂದರ್ಭಕ್ಕೆ ತಕ್ಕಂತೆ ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ/ ಡಿ.ಆರ್.ಡಿ.ಎ.ಯ ಸರಪಂಚರು ಅಥವಾ ಜಿಲ್ಲಾಧಿಕಾರಿಗಳು ಅಥವಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಕುರಿತಂತೆ ಯಾವ ನಿಬಂಧನೆಗಳನ್ನೂ ಉಲ್ಲಂಘಿಸಲಾಗಿಲ್ಲವೆಂದು, ಪ್ರಮಾಣ ಪತ್ರವನ್ನು ಕೊಡಬೇಕು.

VI. ಜಿಲ್ಲಾ ಅನುಷ್ಠಾನ ಸಂಸ್ಥೆಯು, ಎರಡನೆಯ ಅಥವಾ ಮುಂದಿನ (ನಂತರದ) ಅನುದಾನ ಬಿಡುಗಡೆಗಾಗಿ, ರಾಜ್ಯ ಸರ್ಕಾರದ ಗ್ರಾಮೀಣ ನೈರ್ಮಲ್ಯ ಉಸ್ತುವಾರಿ ವಿಭಾಗದ ಮೂಲಕ ಪ್ರಸ್ತಾವನೆ ಸಲ್ಲಿಸಬೇಕು.

VII. ಲಭ್ಯವಿರುವ ಶೇ.80ರಷ್ಟು ನಿಧಿಯ ವಿನಿಯೋಗವಾಗಿದ್ದರೆ ಮಾತ್ರ (ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿಧಿಗಳು ಪ್ರತ್ಯೇಕವಾಗಿ) ಮತ್ತು ವಿನಿಯೋಗ(ವೆಚ್ಚದ)ದ ಪ್ರಮಾಣ ಪತ್ರ ಹಾಗೂ ಅಕೌಂಟೆಂಟ್ ಜನರಲ್ / ಚಾರ್ಟರ್ಡ್ ಅಕೌಂಟೆಂಟರ ಹಿಂದಿನ ವರ್ಷಗಳ ವರದಿಗಳನ್ನು ಸಲ್ಲಿಸಿದರೆ, ಕೊನೆಯ ಕಂತನ್ನು ಬಿಡುಗಡೆ ಮಾಡಲಾಗುತ್ತದೆ.

VIII. ಕಾಲಕಾಲಕ್ಕೆ ವಿಧಿಸಬಹುದಾದ ಇತರೆ ಷರತ್ತುಗಳನ್ನು ಸಮಯಕ್ಕೆ ತಕ್ಕಂತೆ ವಿಧಿಸಲಾಗುತ್ತದೆ.

## ಯೋಜನಾ ಅನುದಾನದ ಮೇಲೆ ಗಳಿಸಿದ ಬಡ್ಡಿಯ ಉಪಯೋಗ (ವಿನಿಯೋಗ)

20 ಸಂಪೂರ್ಣ ನೈರ್ಮಲ್ಯ ಆಂದೋಲನದ ನಿಧಿಗಳನ್ನು (ಕೇಂದ್ರ, ರಾಜ್ಯ ಮತ್ತು ಪ್ರಯೋಜನ ಹೊಂದುವ ಪಂಚಾಯತಿಗಳಿಂದ ಸಂಗ್ರಹಿಸಿದ) ಬ್ಯಾಂಕ್ ಖಾತೆ ತೆರೆದು ಇಡಬೇಕು. ಈ ಟಿ.ಎಸ್.ಸಿ ಅನುದಾನದ ಮೇಲೆ ದೊರಕುವ ಬಡ್ಡಿಯ ಹಣವನ್ನು ಟಿ.ಎಸ್.ಸಿ. ಸಂಪನ್ಮೂಲವೆಂದೇ ಪರಿಗಣಿಸಬೇಕು. ಜಿಲ್ಲಾ ಅನುಷ್ಠಾನ ಸಮಿತಿಯು ಈ ಬಡ್ಡಿಯ ಹಣವನ್ನು ಸಹ ಹೆಚ್ಚುವರಿ ಮಾಹಿತಿ, ಸಂಪರ್ಕ ಮತ್ತು ಸಂವಹನ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದಾದರೂ, ಈ ಹಣವನ್ನು ಯೋಜನೆಯ ಗರಿಷ್ಠ ಮಿತಿಗೆ ಮೀರದಂತೆ ಖರ್ಚು ಮಾಡಬೇಕು. ಮತ್ತು ಆ ಟಿ.ಎಸ್.ಸಿ. ಜಿಲ್ಲೆಯ ಕಾಮಗಾರಿಗಳಿಗೆ ಸಂಬಂಧಿಸಿದ ಹೆಚ್ಚುವರಿ ಸೌಲಭ್ಯಗಳಿಗೆ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಬಳಸಿಕೊಳ್ಳಬಹುದು. ಜಿಲ್ಲಾ ಅನುಷ್ಠಾನ ಸಮಿತಿಯು ತನ್ನ ಮುಂದಿನ ನಿಧಿಯ ವಿತರಣಾ ಕಂತುಗಳಿಗೆ ಬೇಡಿಕೆ ಸಲ್ಲಿಸುವಾಗ ಈ ಟಿ.ಎಸ್.ಸಿ. ನಿಧಿಯ ಮೇಲಿನ ಬಡ್ಡಿಯ ಹಣದ ಉಪಯೋಗದ ಕುರಿತು ವಿವರಗಳನ್ನು ಸಲ್ಲಿಸಬೇಕು ಮತ್ತು ಈ ವಿವರಗಳನ್ನು ನಿಧಿ ಉಪಯೋಗದ ಪ್ರಮಾಣ ಪತ್ರಗಳಲ್ಲಿ ನೀಡಬೇಕು.

## ನಿರ್ವಹಣೆ:

21 ಹೊಸತಾಗಿ ನಿರ್ಮಿಸಲಾದ ನೈರ್ಮಲ್ಯ ಸೌಕರ್ಯಗಳ ಸಮರ್ಪಕ ಬಳಕೆ ಮತ್ತು ನಿರ್ವಹಣೆಯ ಬಗ್ಗೆ ಸಮುದಾಯವನ್ನು, ಕುಟುಂಬದ ಎಲ್ಲ ಸದಸ್ಯರನ್ನು ವಿಶೇಷವಾಗಿ ತರಬೇತುಗೊಳಸಬೇಕು. ಪ್ರತೀ ಕೌಟುಂಬಿಕ ಶೌಚಾಲಯದ ನಿರ್ವಹಣಾ ವೆಚ್ಚವನ್ನು ಆಯಾ ಕುಟುಂಬವೇ ಭರಿಸಬೇಕು. ಸಮುದಾಯ ಶೌಚ ಸಮುಚ್ಚಯಗಳ ನಿರ್ವಹಣಾ ವೆಚ್ಚವನ್ನು ಆಯಾ ಗ್ರಾಮದ ಪಂಚಾಯತಿ ಅಥವಾ ಸೇವಾ ಸಂಸ್ಥೆಗಳು ಅಥವಾ ಸ್ವಸಹಾಯ ಸಂಘಗಳು ಅಥವಾ ಎಲ್ಲ ಸೇರಿ ಭರಿಸಬೇಕು. ಶೌಚ ಸಮುಚ್ಚಯಗಳನ್ನು ನಿರ್ವಹಿಸಲು ಬಳಕೆ ಮತ್ತು ನಿರ್ವಹಣೆಗೆ ತಗಲುವ ಖರ್ಚನ್ನು ಪೂರ್ಣವಾಗಿ ಬಳಕೆದಾರರ ಮೇಲೆ ವಿಧಿಸಬಹುದು. ಶಾಲೆ ಮತ್ತು ಅಂಗನವಾಡಿಗಳ ಶೌಚಾಲಯಗಳ ನಿರ್ವಹಣೆಗೆ ಸಂಬಂಧಪಟ್ಟ ಇಲಾಖೆಗಳು ಸೂಕ್ತ ಹಣಕಾಸಿನ ನೆರವನ್ನು ಒದಗಿಸಬೇಕು.

## ಪರಿಶೀಲನೆ

22 ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಂದ ಕಾಲಕಾಲಕ್ಕೆ ಯೋಜನಾ ಕ್ಷೇತ್ರ ತನಿಖೆಯನ್ನು ಕೈಗೊಳ್ಳುವುದು ತುಂಬಾ ಅಗತ್ಯ. ಕಾಮಗಾರಿಯು ನಿಬಂಧನೆಗಳಿಗೆ ತಕ್ಕಂತೆ ನಡೆಯುತ್ತಿದೆಯೇ, ಕಟ್ಟುವ ಪ್ರಕ್ರಿಯೆಯಲ್ಲಿ ಸಮುದಾಯವು ಸಕ್ರಿಯವಾಗಿ ಭಾಗವಹಿಸಿದೆಯೇ ಮತ್ತು ಶೌಚಾಲಯಗಳು ನೀರಿನ ಮೂಲಗಳನ್ನು ಕಲುಷಿತಗೊಳಸುತ್ತಿಲ್ಲ ಎಂದು ಖಾತ್ರಿ ಮಾಡಿಕೊಳ್ಳಲು ಹಾಗೂ ಶೌಚಾಲಯಗಳನ್ನು ಸೂಕ್ತ ಬಳಕೆದಾರರೇ ಉಪಯೋಗಿಸುತ್ತಿದ್ದಾರೆ ಮತ್ತು ಈ ಶೌಚಾಲಯಗಳು ನಿರ್ಮಾಣದ ನಂತರ ಸಮರ್ಪಕವಾಗಿ ಬಳಕೆಯಾಗುತ್ತಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ತನಿಖೆಯನ್ನು ಕೈಗೊಳ್ಳಬೇಕು. ಈ ತನಿಖೆಯಲ್ಲಿ ಈಗಾಗಲೇ ನಿರ್ಮಿಸಲಾದ ಶೌಚಾಲಯಗಳನ್ನು ಬೇರೆ ಯಾವ ಉದ್ದೇಶಗಳಿಗೂ ಬಳಸುತ್ತಿಲ್ಲ ಎಂಬುದನ್ನೂ ಗಮನಿಸಿ ಖಚಿತಪಡಿಸಬೇಕು.

ಅಲ್ಲದೆ ಆಯಾ ಗ್ರಾಮ ಪಂಚಾಯತಿಯ ಸಂಪೂರ್ಣ ನೈರ್ಮಲ್ಯ ಆಂದೋಲನದ ವಿವರಗಳನ್ನು ಪಾರದರ್ಶಕವಾಗಿ ಗ್ರಾಮ ಪಂಚಾಯತಿಯು ಪ್ರದರ್ಶಿಸಿದೆಯೋ, ಇಲ್ಲವೋ ಎಂಬುದನ್ನು (ಗೋಡೆ ಬರಹಗಳು ಅಥವಾ ಜಾಹೀರಾತು ಫಲಕಗಳ ಮೂಲಕ) ಗಮನಿಸಬೇಕು. ಯೋಜನಾ ಅಧಿಕಾರಿಗಳು ಯೋಜನೆಯ ಅನುಷ್ಠಾನವನ್ನು ಆಗಿಂದಾಗ್ಗೆ ಪರಿಶೀಲಿಸಲು ಪ್ರತಿ ಬ್ಲಾಕುಗಳಲ್ಲೂ ಪರಿಣತರ ತಂಡವನ್ನು ರಚಿಸಬೇಕು. ಈ ಪರಿಶೀಲನೆಯನ್ನು ಪ್ರತೀ ಮೂರು ತಿಂಗಳಗೊಮ್ಮೆಯಾದರೂ ಮಾಡಬೇಕು. ಹೀಗೆಯೇ ರಾಜ್ಯ ಸರ್ಕಾರವೂ ಸಹ ಪ್ರತೀ ಜಿಲ್ಲೆಯಲ್ಲಿ ಮೂರು ತಿಂಗಳಗೊಮ್ಮೆ ಯೋಜನೆಯ ಪರಿಶೀಲನೆಯನ್ನು ನಡೆಸಬೇಕು. ಇವುಗಳ ಜೊತೆಗೆ ಭಾರತ ಸರ್ಕಾರವು, ಯೋಜನಾ ಅನುಷ್ಠಾನದ ಗುಣಮಟ್ಟವನ್ನು ನೋಡಲು ತನ್ನ ಪರಿಶೀಲನಾ ಆಯೋಗಗಳನ್ನು ಆಗಾಗ ಕಳುಹಿಸುತ್ತಿರುತ್ತದೆ.

## ಯೋಜನೆಯ ಪುನರ್‌ಪರಿಶೀಲನೆ:

23 ಒಮ್ಮೆ ಪೂರ್ವಭಾವಿ (ಪ್ರಾಥಮಿಕ) ಸಮೀಕ್ಷೆ ನಡೆಸಿದ ನಂತರ, ವಿವಿಧ ಕಾಮಗಾರಿಗಳಲ್ಲಿ ಕೆಲವು ಅಗತ್ಯ ಬದಲಾವಣೆಗಳನ್ನು ಮಾಡಬೇಕಾಗಬಹುದು. ಸೂಕ್ತ ಪರಿಶೀಲನೆಯ ನಂತರ ಇಂತಹ ಅಗತ್ಯ ಬದಲಾವಣೆಗಳಿಗೆ ಕುಡಿಯುವ ನೀರು ಸರಬರಾಜು ಇಲಾಖೆಯು ಪುನರ್ ನಿಗಧಿ ಪಡಿಸಿದಂತೆ ಅನುಮತಿ ನೀಡಬೇಕು. ಈ ಯೋಜನಾ ಬದಲಾವಣೆಯನ್ನು ಎನ್.ಎಸ್.ಎಸ್.ಸಿ.ಯ ಮುಂದೆ ಅನುಮೋದನೆಗಾಗಿ ಇಡಬೇಕು.

## ವರದಿಗಳು:

24 ಯೋಜನಾ ಅಧಿಕಾರಿಗಳಂದ, ರಾಜ್ಯ ಮತ್ತು ಕೇಂದ್ರಾಡಳತ ಪ್ರದೇಶಗಳಂದ, ಭಾರತ ಸರ್ಕಾರಕ್ಕೆ ಈ ಕೆಳಗಿನ ವರದಿಗಳನ್ನು ಕಳುಹಿಸಬೇಕು.

- ಮಾಸಿಕ ಪ್ರಗತಿ ವರದಿ–ಪ್ರತೀ ತಿಂಗಳನ ಪ್ರಗತಿ ವರದಿಯನ್ನು ಮುಂಬರುವ ತಿಂಗಳನ 20ನೇ ತಾರೀಖಿನೊಳಗಾಗಿ ಸಲ್ಲಿಸಬೇಕು. (ಅಡಕ 1 ಗಮನಿಸಿ)
- ಯೋಜನೆಯ ವಾರ್ಷಿಕ ಒಟ್ಟು ವರದಿ – ಯೋಜನೆಯ ಪ್ರತಿ ವರ್ಷದ ಸಂಗ್ರಹಿತ ಸಾಧನೆಗಳನ್ನು ಮುಂಬರುವ ವರ್ಷದ ಏಪ್ರಿಲ್ 30ರೊಳಗೆ ಸಲ್ಲಿಸಬೇಕು (ಅಡಕ 2 ಗಮನಿಸಿ.)
- ಎಲ್ಲಿಯಾದರೂ ಒಣ ಶೌಚಾಲಯಗಳದ್ದಲ್ಲಿ (ವಾಟರ್ ಸೀಲ್ ಇಲ್ಲದೆ ಇರುವ), ಅವುಗಳನ್ನು ನೀರು ಸುರಿದು ಸ್ವಚ್ಛಗೊಳಸುವ ಶೌಚಾಲಯಗಳಾಗಿ ಪರಿವರ್ತಿಸಿ, ಈ ಬಗ್ಗೆ ಆರು ತಿಂಗಳಗೊಮ್ಮೆ ಪ್ರತೀ ಹಣಕಾಸು ವರ್ಷದಲ್ಲಿ ವರದಿ ಒಪ್ಪಿಸಬೇಕು.

## ಮೌಲ್ಯಮಾಪನ:

25 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು, ಸಂಪೂರ್ಣ ನೈರ್ಮಲ್ಯ ಆಂದೋಲನದ ಅನುಷ್ಠಾನದ ಕುರಿತಾಗಿ, ನಿಯತಕಾಲಿಕವಾಗಿ ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳುತ್ತಿರಬೇಕು. ಈ ಮೌಲ್ಯಮಾಪನ ಅಧ್ಯಯನಗಳನ್ನು ಪ್ರತಿಷ್ಠಿತ ಸಂಘ/ಸಂಸ್ಥೆಗಳ ಮೂಲಕ ಕೈಗೊಳ್ಳಬೇಕು. ಈ ಮೌಲ್ಯಮಾಪನ ಅಧ್ಯಯನಗಳ ವರದಿಗಳ ಪ್ರತಿಗಳನ್ನು ಭಾರತ ಸರ್ಕಾರಕ್ಕೆ ಕಳಿಸಿಕೊಡಬೇಕು. ಈ ಪರಿಶೀಲನಾ ಅಧ್ಯಯನಗಳಲ್ಲಿ ಮತ್ತು ಭಾರತ ಸರ್ಕಾರವು ನಡೆಸುವ ಮೌಲ್ಯಮಾಪನ ವರದಿಗಳಲ್ಲಿ ಗುರುತಿಸಿರುವ ಸಮಸ್ಯೆಗಳಿಗೆ ಪರಿಹಾರ ಕ್ರಮವನ್ನು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಕೈಗೊಳ್ಳಬೇಕು. ಈ ಬಗೆಯ ಮೌಲ್ಯಮಾಪನ ಅಧ್ಯಯನಗಳಿಗೆ ತಗಲುವ ವೆಚ್ಚವನ್ನು, ಸಂಪೂರ್ಣ ನೈರ್ಮಲ್ಯ ಆಂದೋಲನದ ಮಾನವ ಸಂಪನ್ಮೂಲ ಘಟಕದಿಂದ ಭರಿಸಬೇಕು.

26 ರಾಜ್ಯಗಳಲ್ಲಿನ ಸಂಪೂರ್ಣ ನೈರ್ಮಲ್ಯ ಆಂದೋಲನದ ಅನುಷ್ಠಾನ ಪ್ರಗತಿ ಪರಿಶೀಲನೆಯನ್ನು ಭಾರತ ಸರ್ಕಾರವು ವರ್ಷಕ್ಕೆ ಎರಡು ಬಾರಿ ಏರ್ಪಡಿಸಬಹುದು. ಕನಿಷ್ಟ ಇಬ್ಬರು ಅಧಿಕಾರಿಗಳು/ವೃತ್ತಿನಿರತರಿಂದ ಕೂಡಿದ ಬಹು ಉಪಯೋಗೀ ಸಮಿತಿಯು ಈ ಪರಿಶೀಲನೆಯನ್ನು ನಡೆಸಬಹುದು.

## ನಿರ್ಮಲ ಗ್ರಾಮ ಪುರಸ್ಕಾರ (ಪ್ರಶಸ್ತಿ)

27 ಸಂಪೂರ್ಣ ನೈರ್ಮಲ್ಯ ಆಂದೋಲನಕ್ಕೆ ಕಳೆ ಕಟ್ಟಲು(ಹೆಚ್ಚಿನ ಮಹತ್ವ ನೀಡಲು) ಭಾರತ ಸರ್ಕಾರವು "ನಿರ್ಮಲ ಗ್ರಾಮ ಪುರಸ್ಕಾರ" ಎಂಬ ಪ್ರತ್ಯೇಕ ಪ್ರಶಸ್ತಿ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಪುರಸ್ಕಾರವನ್ನು ಬಯಲು ಶೌಚ ಅಭ್ಯಾಸಗಳಿಂದ ಸಂಪೂರ್ಣ ಮುಕ್ತಗೊಂಡ ಗ್ರಾಮ ಪಂಚಾಯತಿಗಳಿಗೆ, ತಾಲ್ಲೂಕುಗಳಿಗೆ ಮತ್ತು ಜಿಲ್ಲೆಗಳಿಗೆ ನೀಡಲಾಗುತ್ತದೆ. ಈ ನಿರ್ಮಲ ಗ್ರಾಮ ಪುರಸ್ಕಾರ ಯೋಜನೆಯು ಈ ಕೆಳಗಿನಂತೆ ಇರುತ್ತದೆ.

(ಎ) ಅರ್ಹತೆ

- o ಗ್ರಾಮ ಪಂಚಾಯತಿಗಳು, ತಾಲ್ಲೂಕುಗಳು ಮತ್ತು ಜಿಲ್ಲೆಗಳು 100ರಷ್ಟು ಈ ಕೆಳಗಿನಂತೆ ನೈರ್ಮಲ್ಯಯುತವಾಗಿರಬೇಕು.
  - ಶೇಕಡಾ 100ರಷ್ಟು ಮನೆಯಲ್ಲೂ ವೈಯಕ್ತಿಕ ಶೌಚಾಲಯಗಳಿರಬೇಕು.
  - ಅಲ್ಲಿನ ಶಾಲೆಗಳಲ್ಲಿ ಶೇಕಡಾ 100ರಷ್ಟು ನೈರ್ಮಲ್ಯ ಸೌಕರ್ಯಗಳಿರಬೇಕು.
  - ಬಯಲು ಶೌಚ, ನೀರಿಲ್ಲದ ಶೌಚಾಲಯಗಳು ಮತ್ತು ಕೈಗಳಿಂದ ಮಲ ವಿಲೇವಾರಿ ಪದ್ಧತಿ ಈ ಎಲ್ಲ ಅಭ್ಯಾಸಗಳಿಂದ ಮುಕ್ತವಾಗಿರಬೇಕು ಮತ್ತು
  - ಸ್ವಚ್ಛ ಪರಿಸರವನ್ನು ಸೃಷ್ಟಿ ಮಾಡಿರಬೇಕು.
- o ಒಂದು ನಿರ್ದಿಷ್ಟ ಪ್ರದೇಶದಲ್ಲಿ/ಊರಲ್ಲಿ ಅಥವಾ ಜಿಲ್ಲೆಯಲ್ಲಿ ಸಂಪೂರ್ಣ ನೈರ್ಮಲ್ಯ ಸಾಧಿಸಲು ಮುಖ್ಯ ಪ್ರೇರಕರಾದ, ಕಾರಣಕರ್ತರಾದ ವ್ಯಕ್ತಿಗಳು ಮತ್ತು ಸಂಘ/ಸಂಸ್ಥೆಗಳು

(ಬಿ)ಪ್ರೋತ್ಸಾಹ ಧನದ ಮಾದರಿ

- o ಪುರಸ್ಕಾರ ಮಾದರಿಯು ಅಲ್ಲಿನ ಜನಸಂಖ್ಯೆಯ ಮೇಲೆ ಅವಲಂಬಿಸಿರುತ್ತದೆ ಮತ್ತು ಈ ರೀತಿ ಇರುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರ ಸಂ | ವಿವರಗಳು | ಗ್ರಾಮ ಪಂಚಾಯತಿ | | ಕ್ಷೇತ್ರ | | ಜಿಲ್ಲೆ | |
|---|---|---|---|---|---|---|---|
| 1 | ಜನಸಂಖ್ಯೆ | 5000 ದವರೆಗೆ | 5001ಕ್ಕೆ ಮೇಲ್ಪಟ್ಟು | 50000 ದವರೆಗೆ | 50001ಕ್ಕೆ ಮೇಲ್ಪಟ್ಟು | 10ಲಕ್ಷ ದವರೆಗೆ | 10ಲಕ್ಷಕ್ಕೆ ಮೇಲ್ಪಟ್ಟು |
| 2 | ಶಿಫಾರಸ್ಸು ಮಾಡಿರುವ ಪ್ರೋತ್ಸಾಹ ಧನ | 2.0 | 4.0 | 10.0 | 20.0 | 30.0 | 50.0 |
| 3 | ಶಿಫಾರಸ್ಸು ಮಾಡಿರುವ ಪ್ರೋತ್ಸಾಹ ಧನ(ವ್ಯಕ್ತಿಗಳಿಗೆ) | 0.10 | | 0.20 | | 0.30 | |
| 4 | ಶಿಫಾರಸ್ಸು ಮಾಡಿರುವ ಪ್ರೋತ್ಸಾಹ ಧನ – ಸಂಘ ಸಂಸ್ಥೆಗಳಿಗೆ (ಪಂಚಾಯತ್ ಸಂಸ್ಥೆಗಳನ್ನುಹೊರತುಪಡಿಸಿ) | 0.20 | | 0.35 | | 0.50 | |

ಗ್ರಾಮ ಪಂಚಾಯತಿಗಳು ಮತ್ತು ವ್ಯಕ್ತಿಗಳು ಅಥವಾ ಸಂಘ/ಸಂಸ್ಥೆಗಳು, ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಲು ನಮೂನೆಯನ್ನು ಅಡಕ 12.ಎ ಮತ್ತು 12.ಬಿ ಯಲ್ಲಿ ಕ್ರಮವಾಗಿ ಕೊಡಲಾಗಿದೆ.

(ಸಿ) ಆಯ್ಕೆಯ ವಿಧಾನ

ಶೇಕಡಾ 100ರಷ್ಟು ನಿರ್ಮಲವಾದ ತಾಲ್ಲೂಕುಗಳನ್ನು, ಜಿಲ್ಲೆಗಳನ್ನು ಈ ಕೆಳಗಿನ ಅಂಶಗಳನ್ನು ಆಧರಿಸಿ ಗುರುತಿಸಲಾಗುತ್ತದೆ.

I. ರಾಜ್ಯ ಸರ್ಕಾರವು ಮೇಲೆ ತಿಳಿಸಿರುವ ಪ್ಯಾರ 27 (ಅ)ಅರ್ಹತಾ ನಿಬಂಧನೆಗಳಿಗೆ ಒಳಪಟ್ಟಂತಹ ಗ್ರಾಮ ಪಂಚಾಯತಿಗಳನ್ನು, ತಾಲ್ಲೂಕುಗಳನ್ನು ಮತ್ತು ಜಿಲ್ಲೆಗಳನ್ನು ಅವು ಸಂಪೂರ್ಣ ನೈರ್ಮಲ್ಯ ಸೌಕರ್ಯಗಳನ್ನು ಹೊಂದಿದ್ದಲ್ಲಿ ಗುರುತಿಸಿ ಆರಿಸುತ್ತದೆ. ನಂತರ ರಾಜ್ಯ ಸರ್ಕಾರ ಆಯ್ಕೆಯ ವರದಿಯನ್ನು ಭಾರತ ಸರ್ಕಾರಕ್ಕೆ ಕಳುಹಿಸುತ್ತದೆ.

II. ಭಾರತ ಸರ್ಕಾರವು ಸ್ವತಂತ್ರ ವೀಕ್ಷಕರನ್ನು ಅಥವಾ ಬಹು ವೃತ್ತಿಪರ ತಂಡಗಳನ್ನು, ಜಿಲ್ಲೆಗಳಿಗೆ, ತಾಲ್ಲೂಕುಗಳಿಗೆ ಮತ್ತು ಪಂಚಾಯತಿಗಳಿಗೆ ಅಲ್ಲಿನ ನೈರ್ಮಲ್ಯ ಮತ್ತು ಸ್ವಚ್ಚತೆಯ ಮಟ್ಟವನ್ನು ಅಳೆಯಲು ಕಳುಹಿಸುತ್ತದೆ.

ಪ್ರತಿ ವರ್ಷ ಪುರಸ್ಕಾರಕ್ಕೆ ಅರ್ಹರನ್ನು ಆಯ್ಕೆ ಮಾಡಲು ಅನುಸರಿಸಬೇಕಾದ ಮಾನದಂಡಗಳನ್ನು ರೂಪಿಸಲು 'ರಾಷ್ಟ್ರೀಯ ನಿರ್ಮಲ ಗ್ರಾಮ ಪುರಸ್ಕರ ಸಮಿತಿ'ಯನ್ನು ಈ ಇಲಾಖೆಯು ರಚಿಸುತ್ತದೆ.

(ಡಿ) ಪ್ರೋತ್ಸಾಹ ಧನವನ್ನು ಹೇಗೆ ಉಪಯೋಗಿಸಬಹುದು:

ಪಂಚಾಯತ್ ರಾಜ್ ಸಂಸ್ಥೆಗಳಿಗೆ ದೊರಕುವ ಪ್ರೋತ್ಸಾಹ ಧನವನ್ನು ತಮ್ಮ ಪ್ರದೇಶದ ನೈರ್ಮಲ್ಯ ಸೌಲಭ್ಯಗಳನ್ನು ಉತ್ತಮಗೊಳಿಸಲು ಮತ್ತು ನಿರ್ವಹಣೆ ಮಾಡಲು ಉಪಯೋಗಿಸಬಹುದು. ಪಂಚಾಯತ್ ರಾಜ್ ಸಂಸ್ಥೆಗಳು ಈ ಧನವನ್ನು ಘನ ಮತ್ತು ದ್ರವ ವ್ಯರ್ಥ ಪದಾರ್ಥಗಳ ವಿಲೇವಾರಿ ವ್ಯವಸ್ಥೆ, ಚರಂಡಿ ಮತ್ತು ನೈರ್ಮಲ್ಯ ಸೌಲಭ್ಯಗಳ ಉತ್ತಮಗೊಳಿಸುವಿಕೆ, ನಿರ್ವಹಣೆಗಳಿಗೆ ಉಪಯೋಗಿಸಬೇಕು.

## ಸಂಶೋಧನೆ

28 ಆರೋಗ್ಯ, ಶುಚಿತ್ವ, ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಉನ್ನತ ಸಂಶೋಧನಾ ಸಂಸ್ಥೆಗಳು, ಸಂಘಗಳು ಮತ್ತು ಸರ್ಕಾರೇತರ ಸಂಸ್ಥೆಗಳನ್ನು, ಗ್ರಾಮೀಣ ಶೌಚ ಅಭ್ಯಾಸ, ಕಸ ವಿಲೇವಾರಿ, ನೈರ್ಮಲ್ಯ ಅಭ್ಯಾಸಗಳನ್ನು ಕುರಿತು ಹೆಚ್ಚಿನ ಸಂಶೋಧನೆ ಕೈಗೊಳ್ಳಲು ನಿಯೋಜಿಸಬೇಕು. ಈ ಹೆಚ್ಚಿನ ಅಧ್ಯಯನಗಳ/ಸಂಶೋಧನೆಗಳ ಫಲಿತಾಂಶವು, ಆಯಾ ಪ್ರದೇಶದ ಭೌಗೋಳಿಕ ಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಮೀಣ ಕಸ ವಿಲೇವಾರಿಗೆ, ಕಡಿಮೆ ವೆಚ್ಚದ, ಧೀರ್ಘಕಾಲವಿರುವ ಸುಸ್ಥಿರ ತಂತ್ರಜ್ಞಾನಗಳನ್ನು ತಯಾರಿಸಲು ನೆರವಾಗಬೇಕು. ಭಾರತ ಸರ್ಕಾರವು ಈ ಅಧ್ಯಯನಗಳನ್ನು ನಿಯೋಜಿಸುತ್ತದೆ. ಇದಲ್ಲದೆ ರಾಜ್ಯ ಸರ್ಕಾರವೂ ಸಹ ಈ ಯೋಜನೆಗೆ ಪೂರಕವಾದ ಅಧ್ಯಯನಗಳನ್ನು ಆಯೋಜಿಸಬಹುದು. ಈ ಅಧ್ಯಯನಗಳ ವೆಚ್ಚವನ್ನು ಸಂಪೂರ್ಣ ನೈರ್ಮಲ್ಯ ಯೋಜನೆಯ ಮಾನವ ಸಂಪನ್ಮೂಲ ಘಟಕವು ಭರಿಸಬಹುದು. ಒಂದು ವೇಳೆ ಅನುದಾನದ ಕೊರತೆಯಾದರೆ, ಅಂತಹ ಸಂದರ್ಭದಲ್ಲಿ ಭಾರತ ಸರ್ಕಾರವು ಅಗತ್ಯವಾದ ಹೆಚ್ಚುವರಿ ಸಹಕಾರವನ್ನು ಕೊಡುತ್ತದೆ.

## ವಾರ್ಷಿಕ ಲೆಕ್ಕಪರಿಶೋಧನೆ

29 ಜಿಲ್ಲಾ ಅನುಷ್ಠಾನ ಸಂಸ್ಥೆಯು ವಾರ್ಷಿಕವಾಗಿ ತನ್ನ ಖಾತೆಗಳನ್ನು ಚಾರ್ಟರ್ಡ್ ಅಕೌಂಟೆಂಟರಿಂದ ಆಡಿಟ್ ಮಾಡಿಸಿ, ವರದಿಯನ್ನು ರಾಜ್ಯ ಸರ್ಕಾರಕ್ಕೆ ಮತ್ತು ಭಾರತ ಸರ್ಕಾರಕ್ಕೆ ಸಲ್ಲಿಸಬೇಕು. ಅಲ್ಲದೆ ಜಿಲ್ಲಾ ಅನುಷ್ಠಾನ ಸಂಸ್ಥೆಯು ಮುಂಬರುವ ನಿಧಿ ಕಂತುಗಳ ಮಂಜೂರಾತಿಗೆ ಬೇಡಿಕೆ ಸಲ್ಲಿಸುವಾಗ, ಹಿಂದಿನ ಆಡಿಟ್ ಮಾಡಿಸಿದ ಖಾತೆಯ ವಿವರಗಳನ್ನು ನೀಡಬೇಕು.

## ಯೋಜನೆಯನ್ನು ಪೂರ್ಣಗೊಳಿಸುವಿಕೆ

30 ಒಂದು ಜಿಲ್ಲೆಯಲ್ಲಿ ಈ ಸಂಪೂರ್ಣ ನೈರ್ಮಲ್ಯ ಆಂದೋಲನವು ಎಲ್ಲ ರೀತಿಯಲ್ಲೂ ಪೂರ್ಣಗೊಂಡಾಗ ಜಿಲ್ಲಾ ಅನುಷ್ಠಾನ ಸಂಸ್ಥೆಯು, ಯೋಜನೆಯು ಪೂರ್ಣಗೊಂಡ ವರದಿಯನ್ನು ಆಡಿಟ್ ಪ್ರಮಾಣ ಪತ್ರ ಮತ್ತು ನಿಧಿ ವಿನಿಯೋಗ(ಉಪಯೋಗ) ಪ್ರಮಾಣ ಪತ್ರಗಳೊಡನೆ ರಾಜ್ಯ ಸರ್ಕಾರದ ಮೂಲಕವಾಗಿ ಭಾರತ ಸರ್ಕಾರದ

ಕುಡಿಯುವ ನೀರು ಸರಬರಾಜು ಇಲಾಖೆ, ಗ್ರಾಮೀಣ ಅಭಿವೃದ್ಧಿ ಸಚಿವಾಲಯಕ್ಕೆ ಸಲ್ಲಿಸಬೇಕು. ಕೇಂದ್ರ ಸರ್ಕಾರವು ವರದಿಯ ಸ್ವೀಕಾರ ಅಥವಾ ತಿರಸ್ಕೃತಿಯ ಕುರಿತು ರಾಜ್ಯ ಸರ್ಕಾರಕ್ಕೆ ಮತ್ತು ಜಿಲ್ಲಾ ಅನುಷ್ಠಾನ ಸಂಸ್ಥೆಗೆ ತಿಳಿಸುವುದು. ಯಾವುದೇ ಕಾರಣಕ್ಕೂ ಸಂಪೂರ್ಣ ನೈರ್ಮಲ್ಯ ಆಂದೋಲನವನ್ನು ಪೂರ್ಣಗೊಳಿಸುವ ಅವಧಿಯು ಭಾರತ ಸರ್ಕಾರದಿಂದ ಯೋಜನೆಯು ಮಂಜೂರಾದ ಅಥವಾ ನಿಧಿಯ ಮೊದಲ ಕಂತು ಬಿಡುಗಡೆಯಾದ ದಿನಾಂಕದಿಂದ 4 ವರ್ಷಗಳಿಗೆ ಮೀರುವಂತಿಲ್ಲ. ಯೋಜನೆಯು ಪೂರ್ಣಗೊಂಡ ನಂತರದ ಮೌಲ್ಯಮಾಪನವನ್ನು ಭಾರತ ಸರ್ಕಾರವು ಅನಿಗಧಿತವಾಗಿ (random) ಕೈಗೆತ್ತಿಕೊಳ್ಳುತ್ತದೆ. ರಾಜ್ಯ ಕೂಡ ಇಂತಹ ಮೌಲ್ಯಮಾಪನಗಳನ್ನು ಕೈಗೊಳ್ಳಬಹುದು ಮತ್ತು ಇದಕ್ಕೆ ಭಾರತ ಸರ್ಕಾರದ ಸಹಾಯವನ್ನು ಅಪೇಕ್ಷಿಸಬಹುದು.

---**---

## ಕೇಂದ್ರೀಯ ಗ್ರಾಮೀಣ ನೈರ್ಮಲ್ಯ ಯೋಜನೆ
## ಸಂಪೂರ್ಣ ನೈರ್ಮಲ್ಯ ಆಂದೋಲನ: ಮಾಸಿಕ ಪ್ರಗತಿ ವರದಿ.

**__________ತಿಂಗಳು;_____________ಜಿಲ್ಲೆ; _______________ರಾಜ್ಯ.**

### ಎ. ಭೌತಿಕ ಪ್ರಗತಿ ವರದಿ

| | ಗೃಹ ಶೌಚಾಲಯಗಳು | | | | ನೈರ್ಮಲ್ಯ ಸಮುಚ್ಚಯಗಳು | | ಶಾಲಾ ಶೌಚಾಲಯಗಳು | | ಬಾಲವಾಡಿ ಶೌಚಾಲಯಗಳು | | | |
|---|---|---|---|---|---|---|---|---|---|---|---|---|
| | ಅನುಮೋದಿತ | | ಸಾಧಿತ | | ಅನುಮೋದಿತ | ಸಾಧಿತ | ಅನುಮೋದಿತ | ಸಾಧಿತ | ಅನುಮೋದಿತ | ಸಾಧಿತ | ಅನುಮೋದಿತ | ಸಾಧಿತ |
| | | | | | | | | | | | | |
| | | | | | | | | | | | | |
| ಒಟ್ಟು | | | | | | | | | | | | |

### ಬಿ. ಪ.ಜಾ/ಪ.ವ.ದವರ ಕಾಮಗಾರಿ ಮತ್ತು ಆರ್ಥಿಕ ಪ್ರಗತಿ ವರದಿ

| ಗೃಹ ಶೌಚಾಲಯಗಳು | | | | | | | |
|---|---|---|---|---|---|---|---|
| ಕಟ್ಟಿಸಲ್ಪಟ್ಟವು | | | | ವೆಚ್ಚ (ಲಕ್ಷ ರೂಗಳಂತೆ) | | | |
| ಪ.ಜಾ | ಪ.ವ | ಸಾಮಾನ್ಯ | ಒಟ್ಟು | ಪ.ಜಾ | ಪ ವ | ಸಾಮಾನ್ಯ | ಒಟ್ಟು |
| | | | | | | | |
| | | | | | | | |

### ಸಿ. ಹಣಕಾಸಿನ ಪ್ರಗತಿ ವರದಿ

| | ಖರ್ಚಿನ ವಿವರ (ರೂ ಲಕ್ಷಗಳಲ್ಲಿ) | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | ಗೃಹ ಶೌಚಾಲಯಗಳು | | | ನೈರ್ಮಲ್ಯ ಸಮುಚ್ಚಯಗಳು | | | ಶಾಲಾ ಶೌಚಾಲಯಗಳು | | | ಬಾಲವಾಡಿ ಶೌಚಾಲಯಗಳು | | | | | ಪ್ರಾರಂಭಿಕ ಚಟುವಟಿಕೆಗಳು | ಆಡಳಿತ ವೆಚ್ಚಗಳು | | ಮಾಹಿತಿ, ಶಿಕ್ಷಣ ಸಂಪರ್ಕ | | ಒಟ್ಟು | | |
| | ಕೇಂದ್ರ | ರಾಜ್ಯ | | ಕೇಂದ್ರ | ರಾಜ್ಯ | ಪಂಚಾಯ್ತಿ | ಕೇಂದ್ರ | ರಾಜ್ಯ | ಪಿ.ಟಿ.ಎ. | ಕೇಂದ್ರ | ರಾಜ್ಯ | ಪಂಚಾಯ್ತಿ | ಕೇಂದ್ರ | ರಾಜ್ಯ | ಕೇಂದ್ರ | ಕೇಂದ್ರ | ರಾಜ್ಯ | ಕೇಂದ್ರ | ರಾಜ್ಯ | ಕೇಂದ್ರ | ರಾಜ್ಯ | |
| | | | | | | | | | | | | | | | | | | | | | | |
| | | | | | | | | | | | | | | | | | | | | | | |
| | | | | | | | | | | | | | | | | | | | | | | |
| | | | | | | | | | | | | | | | | | | | | | | |

**ಡಿ. ನಿಧಿಗಳ ಸ್ವೀಕೃತಿ**

| | ಕೇಂದ್ರ | ರಾಜ್ಯ | ಪಂಚಾಯ್ತಿ | ಬಳಕೆದಾರ | ಒಟ್ಟು |
|---|---|---|---|---|---|
| | | | | | |
| | | | | | |
| ಒಟ್ಟು | | | | | |

**ಜಿಲ್ಲಾ ಯೋಜನಾಧಿಕಾರಿಗಳು ಬ್ಲಾಕ್‌ವಾರು  ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೂ, ರಾಜ್ಯ ಸರ್ಕಾರವು, ಜಿಲ್ಲಾವಾರು ಮಾಹಿತಿಯನ್ನು ಭಾರತ ಸರ್ಕಾರಕ್ಕೂ ಸಲ್ಲಿಸಬೇಕು.**

ಪ.ಜಾ : ಪರಿಶಿಷ್ಟ ಜಾತಿ
ಪ.ವ.: ಪರಿಶಿಷ್ಟ ವರ್ಗ
ಪಂಚಾಯ್ತಿ : ಗ್ರಾಮ ಪಂಚಾಯತಿ
ಬ.ದಾ : ಬಳಕೆದಾರ
ಪಿ.ಟಿ.ಎ. : ಪೋಷಕರ ಮತ್ತು ಶಿಕ್ಷಕರ ಸಂಘಟನೆ

**ಕಛೇರಿ**
**ಮುದ್ರೆ**

ಅನುಬಂಧ–II

ಕೇಂದ್ರೀಯ ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮ
ಸಂಪೂರ್ಣ ನೈರ್ಮಲ್ಯ ಆಂದೋಲನ
ವಾರ್ಷಿಕ ಪ್ರಗತಿ ವರದಿ

ವರ್ಷ 20 [ ] [ ] – ವರ್ಷ 20 [ ] [ ]

ರಾಜ್ಯ / ಕೇಂದ್ರಾಡಳಿತ ಪ್ರದೇಶ :_______________

ಅ. ಭೌತಿಕ ಪ್ರಗತಿ

| ಅಂಶಗಳು(ಘಟಕಗಳು) | ಯೋಜನಾ ಗುರಿ | ತ್ರೈಮಾಸಿಕ ಸಾಧನೆ | ಒಟ್ಟು ಸಾಧನೆ |
|---|---|---|---|
| ವೈಯಕ್ತಿಕ ಗೃಹ ಶೌಚಾಲಯಗಳು | | | |
| ಮಹಿಳೆಯರ ಶೌಚಾಲಯ ಸಮುಚ್ಚಯಗಳು | | | |
| ಶಾಲಾ ಶೌಚಾಲಯಗಳು | | | |
| ಅಂಗನವಾಡಿ ಮತ್ತು ಬಾಲವಾಡಿಗಳ ಶೌಚಾಲಯಗಳು | | | |
| ಗ್ರಾಮೀಣ ನೈರ್ಮಲ್ಯ ಮಳಿಗೆ ಮತ್ತು ಉತ್ಪಾದನಾ ಕೇಂದ್ರಗಳು. | | | |

ಬ. ವಿಶೇಷ ಅವಕಾಶ

| ಪಂಗಡ/ವಿಭಾಗ | ಯೋಜನಾ ಗುರಿ | ತ್ರೈಮಾಸಿಕ ಸಾಧನೆ | ಒಟ್ಟು ಸಾಧನೆ |
|---|---|---|---|
| ಪರಿಶಿಷ್ಟ ಜಾತಿಯವರಿಗೆ ಗೃಹ ಶೌಚಾಲಯಗಳು | | | |
| ಪರಿಶಿಷ್ಟ ಪಂಗಡದವರಿಗೆ ಗೃಹ ಶೌಚಾಲಯಗಳು | | | |
| ಅಂಗವಿಕಲರಿಗೆ ಗೃಹ ಶೌಚಾಲಯಗಳು | | | |
| ಶಾಲೆಯಲ್ಲಿ ಗಂಡು ಮತ್ತು ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳು | | | |

ಆರ್ಥಿಕ ಪ್ರಗತಿ

ಅ. ರಶೀದಿಗಳು

ತ್ರೈಮಾಸಿಕದ  ಮೊದಲ ದಿನದ ಆರಂಭ ಶಿಲ್ಕು
(ರೂ.ಗಳು ಲಕ್ಷದಲ್ಲಿ) ____________________

ಕೇಂದ್ರದಿಂದ ಬಿಡುಗಡೆ (ಅನುದಾನ)
(ರೂ.ಗಳು ಲಕ್ಷದಲ್ಲಿ) ____________________

ರಾಜ್ಯದಿಂದ ಬಿಡುಗಡೆ
(ರೂ.ಗಳು ಲಕ್ಷದಲ್ಲಿ) ____________________

ಫಲಾನುಭವಿಗಳ/ಪಂಚಾಯತಿಗಳ ಕೊಡುಗೆ
(ರೂ.ಗಳು ಲಕ್ಷದಲ್ಲಿ) ____________________

ಸಂಗ್ರಹಿತವಾದ ಬಡ್ಡಿ
(ರೂ.ಗಳು ಲಕ್ಷದಲ್ಲಿ) ____________________

ಒಟ್ಟು ಇರುವ ನಿಧಿ
(ರೂ.ಗಳು ಲಕ್ಷದಲ್ಲಿ) ____________________

ಆ. ವೆಚ್ಚ

ಕೇಂದ್ರದ ಪಾಲಿನ ನಿಧಿಯ ಉಪಯೋಗ
(ರೂ.ಗಳು ಲಕ್ಷದಲ್ಲಿ) ____________________

ರಾಜ್ಯದ ಪಾಲಿನ ನಿಧಿಯ ಉಪಯೋಗ
(ರೂ.ಗಳು ಲಕ್ಷದಲ್ಲಿ) ____________________

ಫಲಾನುಭವಿಗಳ/ಪಂಚಾಯತಿಗಳ ಕೊಡುಗೆಯ ಪಾಲಿನ ಉಪಯೋಗ (ರೂ.ಗಳು ಲಕ್ಷದಲ್ಲಿ) ____________________

ತ್ರೈಮಾಸಿಕದ ಒಟ್ಟು ವೆಚ್ಚ
(ರೂ.ಗಳು ಲಕ್ಷದಲ್ಲಿ) ____________________

ಲಭ್ಯವಿರುವ ನಿಧಿಯಲ್ಲಿ ಶೇಕಡಾವಾರು ವೆಚ್ಚ : ____________________

ಕಛೇರಿಯ ಮುದ್ರೆ

ದಿನಾಂಕದೊಡನೆ ಸಹಿ
ಹೆಸರು:
ಹುದ್ದೆ:

**ಅಡಕ 3**

ಚಾರ್ಟರ್ಡ್ ಅಕೌಂಟೆಂಟರ ಆಡಿಟ್ ವರದಿಯಲ್ಲಿ ಪೂರೈಸಬೇಕಾಗಿರುವ ಅಂಶಗಳು(ವಿಷಯಗಳು)

- ಅನುಷ್ಟಾನಗೊಳಸುವ ಸಂಸ್ಥೆಯು ನಿರ್ವಹಿಸಬೇಕಾಗಿರುವ ಬ್ಯಾಂಕ್ ಖಾತೆಗಳ ಸಂಖ್ಯೆ (ಇಡೀ ಯೋಜನೆಗೆ ಸಂಬಂಧಿಸಿದಂತೆ ಒಂದೇ ಖಾತೆಯನ್ನು ನಿರ್ವಹಿಸಬೇಕು)
- ನಿರ್ದಿಷ್ಟ ಠೇವಣಿಗಳಲ್ಲಿ ಏನಾದರೂ ನಿಧಿ ಇದ್ದರೆ ( ಯೋಜನಾ ನಿಧಿಗಳನ್ನು ಉಳಿತಾಯ ಖಾತೆಯಲ್ಲಿ ಮಾತ್ರ ಸಂಗ್ರಹಿಸಬೇಕು)
- ಉಳಿತಾಯ ಖಾತೆಯಲ್ಲಿ ಸಂಗ್ರಹಿಸಿದ ಹಣಕ್ಕೆ ದೊರಕಿದ ಬಡ್ಡಿಯನ್ನು ಖಾತೆ ಹಣಕ್ಕೆ ಸೇರಿಸಿ ಯೋಜನೆಯಲ್ಲಿ ಉಪಯೋಗಿಸಲಾಗಿದೆಯೇ?
- ಅನುಷ್ಟಾನಗೊಳಸುವ ಸಂಸ್ಥೆಯ ಖಾತೆಗೆ ಹಣ ಜಮಾ ಮಾಡುವಾಗ ಆ ಬ್ಯಾಂಕಿನವತಿಯಿಂದ ಏನಾದರೂ ತಡವಾಗಿತ್ತೇ? ಆಗಿದ್ದರೆ ಎಷ್ಟು ತಡವಾಗಿತ್ತು?
- ಹಣಕಾಸಿನ ಮಸ್ತಕದ ಉಳಿತಾಯ ಮತ್ತು ಪಾಸ್ ಮಸ್ತಕದ ಉಳಿತಾಯದ ಹೊಂದಾಣಿಕೆಯನ್ನು ಬ್ಯಾಂಕ್ ಪಾಕ್ಷಿಕವಾಗಿ (15 ದಿನಗಳಿಗೊಮ್ಮೆ) ಮಾಡುತ್ತಿದೆಯೇ? ಈ ಬ್ಯಾಂಕ್ ಹೊಂದಾಣಿಕೆಯಲ್ಲಿ ಬಡ್ಡಿಯನ್ನು ಸೇರಿಸಿಕೊಳ್ಳಬೇಕು. ಬ್ಯಾಂಕಿನ ಮಾರ್ಚ್ 31ರ ಹೊಂದಾಣಿಕೆ ಘೋಷಣಾಪತ್ರವನ್ನು ಆಡಿಟ್ ವರದಿಯೊಂದಿಗೆ ಲಗತ್ತಿಸಿ ಕೊಡಬೇಕು.
- ಅನುಷ್ಟಾನಗೊಳಸುವ ಸಂಸ್ಥೆಯು ಹಣಕಾಸಿನ ಮಸ್ತಕವನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆಯೇ?
- ಬ್ಯಾಂಕ್ ಹೊಂದಾಣಿಕೆಯಲ್ಲಿರುವಂತೆ ಮಾರ್ಚ್ ೩೧ ರೊಳಗೆ ಚೆಕ್‌ಗಳನ್ನು ನೀಡಿದ್ದು ಹಣ ಪಾವತಿಯಾಗದೆ ಇದ್ದಲ್ಲಿ (ಈ ಹಣವನ್ನು ಖಾತೆಯ ಪ್ರಾರಂಭದ ಉಳಿತಾಯವನ್ನಾಗಿ ಪರಿಗಣಿಸುವುದು)
- ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಗಳು ಪಡೆದ ಮುಂಗಡ ವೆಚ್ಚಗಳು ಗ್ರಾಮವಾರು ಇರಬೇಕು ಮತ್ತು ಗ್ರಾಮ ನೀರು ನೈರ್ಮಲ್ಯ ಸಮಿತಿಗಳ ಮುಕ್ತಾಯ ಉಳಿತಾಯ ಇಟ್ಟಿರಬೇಕು.
- ಅನುಮೋದನೆಯಿಲ್ಲದೆ (ಅನುಮತಿ ಇಲ್ಲದೆ) ಇರುವ ವೆಚ್ಚವೇನಾದರೂ ಇದೆಯೇ?
- ನಿಧಿಯನ್ನು ಬೇರೆ ಉದ್ದೇಶಗಳಿಗೆ ಏನಾದರೂ ಬಳಸಲಾಗಿದೆಯೇ?

ಅಡಕ 4

ಚಾರ್ಟರ್ಡ್ ಅಕೌಂಟೆಂಟರ ಆಡಿಟ್ ವರದಿಯಲ್ಲಿ ಪೂರೈಸಬೇಕಾಗಿರುವ ಅಂಶಗಳ ತಪಾಸಣಾ ಪಟ್ಟಿ

- ❑ ಯೋಜನೆಗೆ ಸಂಬಂಧಿಸಿದಂತೆ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ನಿರ್ವಹಿಸಲಾಗಿದೆಯೇ
- ❑ ಯೋಜನಾ ನಿಧಿಯನ್ನು ನಿಗದಿತ ಠೇವಣಿಗಳಲ್ಲಿ ಏನಾದರೂ ಇಡಲಾಗಿದೆಯೇ
- ❑ ಯೋಜನಾ ನಿಧಿಯ ಉಳಿತಾಯ ಖಾತೆಯಿಂದ ಸಂಗ್ರಹವಾಗುವ ಬಡ್ಡಿಯು ಆ ಖಾತೆಗೇ ಜಮೆಯಾಗುತ್ತಿದೆಯೇ ಮತ್ತು ಯೋಜನೆಯ ಸಲುವಾಗಿಯೇ ಉಪಯೋಗವಾಗುತ್ತಿದೆಯೇ
- ❑ ಅನುಷ್ಠಾನಗೊಳಿಸುವ ಸಂಸ್ಥೆಯ ಖಾತೆಗೆ ಜಮಾ ಮಾಡುವಾಗ, ಆ ಬ್ಯಾಂಕಿನ ವತಿಯಿಂದ ಏನಾದರೂ ತಡವಾಗಿತ್ತೇ? ಆಗಿದ್ದರೆ ಎಷ್ಟು ತಡವಾಗಿತ್ತು?
- ❑ ಮಾರ್ಚ್ 31ರ ಬ್ಯಾಂಕಿನ ಹೊಂದಾಣಿಕೆ ಘೋಷಣಾ ಪತ್ರವನ್ನು ಆಡಿಟ್ ವರದಿಯೊಂದಿಗೆ ಲಗತ್ತಿಸಿ ಕೊಡಲಾಗಿದೆಯೇ?
- ❑ ಹಣಕಾಸಿನ ಪುಸ್ತಕವನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆಯೇ?
- ❑ ಮಾರ್ಚ್ 31ರ ಬ್ಯಾಂಕ್ ಹೊಂದಾಣಿಕೆ ಘೋಷಣಾ ಪತ್ರದಲ್ಲಿರುವಂತೆ ಆ ಹಣಕಾಸು ವರ್ಷದಲ್ಲಿ ಪಾವತಿಯಾಗದೆ ಇದ್ದ ಚೆಕ್‌ಗಳ ವಿವರವನ್ನು ಕೊಡಲಾಗಿದೆಯೇ (ಈ ಪಾವತಿಯಾಗದೆ ಇರುವ ಚೆಕ್ಕುಗಳ ಹಣವನ್ನು ಮುಂದಿನ ಹಣಕಾಸು ವರ್ಷದ ಖಾತೆಯ ಪ್ರಾರಂಭದ ಉಳಿತಾಯವೆಂದು ತೋರಿಸಬೇಕು)
- ❑ ಎಲ್ಲಾ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಗಳು ಪಡೆದ ಮುಂಗಡ ವೆಚ್ಚಗಳು ಮತ್ತು ಅಂತಿಮ ಶಿಲ್ಕನ್ನು ಒಳಗೊಂಡ ಅನುಬಂಧವನ್ನು ಲೆಕ್ಕ ಪರಿಶೋಧನಾ ವರದಿಗೆ ಲಗತ್ತಿಸಲಾಗಿದೆಯೇ?
- ❑ ಅನುಮೋದನೆಯಿಲ್ಲದೆ (ಅನುಮತಿ ಇಲ್ಲದೆ) ಇರುವ ವೆಚ್ಚವೇನಾದರೂ ಇದೆಯೇ
- ❑ ನಿಧಿಯನ್ನು ಬೇರೆ ಉದ್ದೇಶಗಳಿಗೆ ಏನಾದರೂ ಬಳಸಲಾಗಿದೆಯೇ?

**ಅಡಕ 5**

**ನಮೂನೆ – ಎ.**

ಜಿಲ್ಲಾ ನೀರು ಮತ್ತು ನೈರ್ಮಲ್ಯ ಆಯೋಗ/ ಡಿ.ಡಬ್ಲ್ಯು.ಎಸ್.ಸಿ/ಮೂಲ ಗುಂಪು(ಕೋರ್ ಗ್ರೂಪ್)/ ವಿ.ಡಬ್ಲ್ಯು.ಎಸ್.ಸಿ.
**ಸ್ವೀಕೃತಿ ಮತ್ತು ಪಾವತಿ ಖಾತೆ, 1.4.------ ರಿಂದ 31.3.---------ವರೆವಿಗೆ**

**ಯೋಜನೆಯ ಹೆಸರು ________________________________________**

| ಸ್ವೀಕೃತಿ | ಮೊತ್ತ | ಪಾವತಿ | ಮೊತ್ತ |
|---|---|---|---|
| **1.** ಪ್ರಾರಂಭಿಕ ಶಿಲ್ಕು<br><br>ಜಿಲ್ಲಾ ನೀರು ಮತ್ತು ನೈರ್ಮಲ್ಯ ಆಯೋಗ/ ಡಿ.ಡಬ್ಲ್ಯು.ಎಸ್.ಸಿ/ ಮೂಲ ಗುಂಪು(ಕೋರ್ ಗ್ರೂಪ್)/ ಗ್ರಾ.ನೀ.ಸ.ನೈ.ಸಂ. (ಯಾವ ಸಂಸ್ಥೆ ಸೂಕ್ತವೋ ಅದು) | | **1.** ಕೊಡಲ್ಪಟ್ಟ ಮುಂಗಡ<br>**i.** ವಿ. ಡಬ್ಲ್ಯು.ಎಸ್.ಸಿ<br>**ii.** ಎಸ್.ಒ<br>**iii.** ಸೇವಾ ಏಜೆನ್ಸಿಗಳು<br>**iv.** ಇತರೆ ಅನುಷ್ಠಾನ ಗೊಳಸುವ ಏಜೆನ್ಸಿಗಳು | |
| **2.** ಅನುದಾನಗಳ ಸ್ವೀಕಾರ<br>**i.** ಕೇಂದ್ರ ಸರ್ಕಾರ<br>**ii.** ರಾಜ್ಯ ಸರ್ಕಾರ<br>**iii.** ಇತರ ಸಂಸ್ಥೆಗಳು | | **2.** ಆಡಿಟ್ ಶುಲ್ಕ | |

| | | | |
|---|---|---|---|
| **3.** ಜಿಲ್ಲಾ ನೀರು ಮತ್ತು ನೈರ್ಮಲ್ಯ ಆಯೋಗ/ ಡಿ.ಡಬ್ಲ್ಯು.ಎಸ್.ಸಿ/ ಕೋರ್ ಗುಂಪುಗಳಗೆ ಬ್ಯಾಂಕಿನಿಂದ ಬಂದ ಬಡ್ಡಿ | | **3.** ಆಡಳತ ವೆಚ್ಚ (ಯೋಜನೆಯಡಿಯಲ್ಲಿ ಮಂಜೂರಾಗಿದ್ದರೆ ಮಾತ್ರ)<br>**a.** ಸಂಬಳ ಮತ್ತು ಭತ್ಯೆಗಳು<br>**b.** ಪ್ರವಾಸ ವೆಚ್ಚ<br>**c.** ಬಾಡಿಗೆ, ದರ ಮತ್ತು ತೆರಿಗೆಗಳು<br>**d.** ಮುದ್ರಣ ಮತ್ತು ಲೇಖನ ಸಾಮಗ್ರಿಗಳು<br>**e.** ಪ್ರಕಟಣೆ ಮತ್ತು ಜಾಹೀರಾತು<br>**f.** ಅಂಚೆ ವಿಲೇವಾರಿ<br>**g.** ದೂರವಾಣಿ<br>**h.** ರಜಾ ಸಂಬಳ ಮತ್ತು ಪಿಂಚಣಿ ಕೊಡುಗೆ<br>**i.** ಮೋಟಾರು ವಾಹನಗಳ ನಿರ್ವಹಣೆ ಮತ್ತು ರಿಪೇರಿ<br>**j.** ಕಛೇರಿ ಸಂಭಾವ್ಯತೆಗಳು<br>**k.** ಇತರೆ | |

| | | | |
|---|---|---|---|
| **4.** ವಾಪಸಾದ ಮುಂಗಡ/ ಸಾಲ/ಅನುದಾನ<br>**a.** ವಿ.ಡಬ್ಲ್ಯು.ಎಸ್.ಸಿ<br>**b.** ಎಸ್.ಓ<br>**c.** ಸೇವಾ ಏಜೆನ್ಸಿಗಳು<br>**d.** ಇತರೆ ಅನುಷ್ಠಾನಗೊಳಸುವ ಏಜೆನ್ಸಿಗಳು | | **4.** ಸಿಬ್ಬಂದಿಗಳಗೆ ಮುಂಗಡ (ಯೋಜನೆಯಲ್ಲಿ ಅನುಮತಿ ಇದ್ದರೆ) | |
| **5.** ಸಿಬ್ಬಂದಿಯಿಂದ ಮುಂಗಡ ಮರುಪಾವತಿ. | | **5.** ಬ್ಯಾಂಕಿನ ಶುಲ್ಕಗಳೇನಾದರೂ ಇದ್ದಲ್ಲಿ | |
| **6.** ಇತರೆ | | **6.** ಜಿಲ್ಲಾ ನೀರು ಮತ್ತು ನೈರ್ಮಲ್ಯ ಆಯೋಗದ ಬಂಡವಾಳ ಸ್ವತ್ತು ರಚನೆಗಾಗಿ ಪಾವತಿಸಿದ ಮೊತ್ತ.<br>**7.** ಇತರೆ<br>**8.** ಜಿಲ್ಲಾ ನೀರು ಮತ್ತು ನೈರ್ಮಲ್ಯ ಆಯೋಗ/ ಡಿ.ಡಬ್ಲ್ಯು.ಎಸ್.ಸಿ/ಕೋರ್ ಗುಂಪು ವಿ.ಡಬ್ಲ್ಯು.ಎಸ್.ಸಿ.ಗಳ ಖಾತೆಯ ಅಂತಿಮ ಶಿಲ್ಕು | |

ಅಡಕ 6

ನಮೂನೆ-ಬಿ.

ಜಿಲ್ಲಾ ನೀರು ಮತ್ತು
ನೈರ್ಮಲ್ಯ ಆಯೋಗ /ಡಿ.ಡಬ್ಲ್ಯು.ಎಸ್.ಸಿ/ಮೂಲಗುಂಪು(ಕೋರ್‌ಗ್ರೂಪ್)/ ವಿ.ಡಬ್ಲ್ಯು.ಎಸ್.ಸಿಯ ಆಯ-ವ್ಯಯ ಖಾತೆ

1.4._____ರಿಂದ 31.3._______ವರೆಗಿನ ಕಾಲಾವಧಿಯವರೆಗೆ,

| ವೆಚ್ಚಗಳು 1 | ಮೊತ್ತ | ಆದಾಯ 2 | ಮೊತ್ತ |
|---|---|---|---|
| 1. ಯೋಜನೆಗಳ ವೆಚ್ಚ<br>a. ವಿ.ಡಬ್ಲ್ಯು.ಎಸ್.ಸಿ<br>b. ಎಸ್.ಒ<br>c. ಸೇವಾ ಏಜೆನ್ಸಿಗಳು<br>(ಸ್ವೀಕೃತ ಬಳಕೆ ಪ್ರಮಾಣ ಪತ್ರಗಳ ಆಧಾರದ ಮೇಲೆ) | | 1. ಪ್ರಸಕ್ತ ಸಾಲಿನಲ್ಲಿ ಪಡೆದುಕೊಂಡ ಅನುದಾನ<br>a. ಕೇಂದ್ರ ಸರ್ಕಾರದಿಂದ<br>b. ರಾಜ್ಯ ಸರ್ಕಾರದಿಂದ<br>c. ಇತರ ಸಂಸ್ಥೆಗಳಿಂದ<br>ಕೂಡಿ: ಪ್ರಸ್ತುತ ವರ್ಷದಲ್ಲಿ ಪಡೆದ ಅನುದಾನ *<br>ಕಳೆಯಿರಿ: ಹಿಂದಿನ ವರ್ಷಕ್ಕೆ ಸಂಬಂಧಿಸಿದ ಅನುದಾನ | |
| 2. ಆಡಿಟ್ ಶುಲ್ಕ | | 2. ಪ್ರಸಕ್ತ ವರ್ಷಕ್ಕೆ, ಬ್ಯಾಂಕ್ ಖಾತೆಗಳ ಮೂಲಕ ದೊರಕಿದ ಬಡ್ಡಿಯ ಮೊತ್ತ<br>ಸೇರಿಸಿ: ಪ್ರಸ್ತುತ ವರ್ಷದ ಬಡ್ಡಿಯ ಮೊತ್ತ *<br>ಕಳೆಯಿರಿ: ಹಿಂದಿನ ವರ್ಷದ ಬಡ್ಡಿಯ ಮೊತ್ತ | |
| 3. ಆಡಳಿತ ಕುರಿತ ವೆಚ್ಚಗಳು<br>i. ಏಜೆನ್ಸಿ ಕಛೇರಿ<br>ii. ಸಂಬಳ ಮತ್ತು ಭತ್ಯೆಗಳು<br>iii. ಸಾರಿಗೆ ವೆಚ್ಚ<br>iv. ಬಾಡಿಗೆ, ದರ ಮತ್ತು ತೆರಿಗೆಗಳು<br>v. ಕಾಗದ ಪತ್ರಗಳು ಮತ್ತು ಪ್ರಿಂಟು(ಅಚ್ಚು ಹಾಕಿಸುವುದು)<br>vi. ಪ್ರಕಟಣೆ ಮತ್ತು ಜಾಹೀರಾತು<br>vii. ಅಂಚೆ ವೆಚ್ಚ<br>iii. ದೂರವಾಣಿ<br>ix. ರಜಾ ಸಂಬಳ ಮತ್ತು ಪಿಂಚಣಿ ಕೊಡುಗೆ<br>x. ಮೋಟಾರ್ ವಾಹನಗಳ ನಿರ್ವಹಣೆ ಮತ್ತು ರಿಪೇರಿ<br>xi. ಇತರ ಅವಶ್ಯಕತೆ<br>xii. ಇತರೆ | | 3. ಅನುಷ್ಠಾನಗೊಳಿಸುವ ಸಂಸ್ಥೆಗಳಿಂದ ಉಪಯೋಗಿಸದೆ ಉಳಿದು ವಾಪಸ್ಸು ಮಾಡಿದ ಅನುದಾನ | |
| 4. ಇತರೆ ವೆಚ್ಚಗಳು | | 4. ಇತರೆ ಸ್ವೀಕೃತಿಗಳು | |
| 5. ಹೊಂದಾಣಿಕೆ ಪಟ್ಟಿಗೆ ಸೇರಿಸಿದ ವೆಚ್ಚಕ್ಕಿಂತ ಹೆಚ್ಚುವರಿಯಾದ ಆದಾಯ | | 5. ಹೊಂದಾಣಿಕೆ ಪಟ್ಟಿಗೆ ಸೇರಿಸಿದ ಆದಾಯಕ್ಕಿಂತ ಹೆಚ್ಚುವರಿಯಾದ ವೆಚ್ಚ | |

* : ಈ ಅಂಶವು ಆ ವರ್ಷಕ್ಕೆ (ಪ್ರಸ್ತುತ ವರ್ಷಕ್ಕೆ) ಮಂಜೂರಾದ ಆದರೆ ಸ್ವೀಕೃತಿಯಾಗಿಲ್ಲದ ಅನುದಾನ ಸಹಾಯವನ್ನು ಒಳಗೊಂಡಿರುತ್ತದೆ.

ಅಡಕ 7

ನಮೂನೆ–ಸಿ.

31ನೇ ಮಾರ್ಚ್,________ರಂತೆ ಹೊಂದಾಣಿಕೆ ಪಟ್ಟಿ

ಜಿಲ್ಲಾ ನೀರು ಮತ್ತು ನೈರ್ಮಲ್ಯ ಆಯೋಗ (ಡಿ.ಡಬ್ಲ್ಯು.ಎಸ್.ಸಿ) / ವಿ.ಡಬ್ಲ್ಯು.ಎಸ್.ಸಿ.ಯ ಹೆಸರು

| ಹೂಡಿಕೆ ನಿಧಿ ಮತ್ತು ಸಾಲಗಳು (ಹೊಣೆಗಳು) | ಪ್ರಸಕ್ತ ವರ್ಷ | ಹಿಂದಿನ ವರ್ಷ |
|---|---|---|
| 1. ಸಂಗ್ರಹಿತ ನಿಧಿ<br>ಆರಂಭ ಶಿಲ್ಕು _____________<br>ಕೂಡು/ಕಳೆ: ಬಾಕಿಯ ವರ್ಗಾವಣೆ ಆದಾಯ ಮತ್ತು ಖರ್ಚಿನಿಂದ ಖಾತೆ +/– ___________________<br>ಅಂತಿಮ ಶಿಲ್ಕು _______________<br>2. ಪ್ರಸ್ತುತ ಹೊಣೆಗಳು (ಸಾಲಗಳು)<br>1. ತೀರಿಸದೆ ಉಳಿದಿರುವ ಖರ್ಚುಗಳು/ ಪಾವತಿಸಬೇಕಾದವು _____________<br>2. ಇತರೆ ಹೊಣೆಗಾರಿಕೆ___________ | ___________<br><br>___________<br>___________<br><br>___________<br>___________ | ___________<br><br>___________<br>___________<br><br>___________<br>__________ |
| ಒಟ್ಟು | | |
| 3. ಆಸ್ತಿಗಳು<br>1. ಸ್ಥಿರಾಸ್ಥಿಗಳು<br>i. ವಾಹನಗಳು<br>ii. ಪೀಠೋಪಕರಣಗಳು<br>iii. ಕಛೇರಿ ಉಪಕರಣಗಳು<br>iv. ಕಂಪ್ಯೂಟರ್‌ಗಳು ಮತ್ತು ಪೂರಕ ಸಲಕರಣೆಗಳು<br>v. ಗ್ರಂಥಾಲಯ ಪುಸ್ತಕಗಳು<br>vi. ಇತರೆ<br>2. ಪ್ರಸಕ್ತ ಆಸ್ತಿಗಳು ಮತ್ತು ಮುಂಗಡ ದಾಸ್ತಾನು<br>ಅಂತಿಮ ಶಿಲ್ಕು<br>a) ನಗದು ಶಿಲ್ಕು ಕೈಯಲ್ಲಿ (DWSM)<br>b) ಬ್ಯಾಂಕಿನಲ್ಲಿರುವ ಶಿಲ್ಕು (DWSM)<br>c) ಸ್ವೀಕೃತಿ ಖಾತೆ ಮತ್ತು ವಸೂಲಾಗಬಹುದಾದ ಮುಂಗಡ<br>I. ವಿ.ಡಬ್ಲ್ಯು.ಎಸ್.ಸಿ.<br>II. ಎಸ್.ಒ.<br>III. ಸೇವಾ ಸಂಸ್ಥೆಗಳು<br>IV. ಸಿಬ್ಬಂದಿ<br><br>ಡಿ. ಪ್ರಸಕ್ತ ವರ್ಷಕ್ಕೆ ಮಂಜೂರಾದ ಆದರೆ ಸ್ವೀಕೃತಿಯಾಗಿಲ್ಲದ ಅನುದಾನ * | | |
| ಒಟ್ಟು | | |

ನಿಗದಿಗೊಳಿಸಿದಂತೆ ಪ್ರಸ್ತುತ ವರ್ಷಕ್ಕೆ ರೂ _______________ಗಳಷ್ಟು ಮೌಲ್ಯದ ಆಸ್ತಿ ನಿರ್ಮಿಸಿರುವುದನ್ನು ಪ್ರಮಾಣಿಸಲಾಗಿದೆ.

* : ಈ ಅಂಶವು ಪ್ರಸ್ತುತ ವರ್ಷಕ್ಕೆ ಮಂಜೂರಾದ ಆದರೆ ಈ ವರ್ಷದಲ್ಲಿ ಸ್ವೀಕೃತಿಯಾಗಿಲ್ಲದ ಅನುದಾನವನ್ನು ಒಳಗೊಂಡಿರುತ್ತದೆ.

**ಅಡಕ 8**

## ನಮೂನೆ – ಡಿ

**ವಿ.ಡಬ್ಲ್ಯು.ಎಸ್.ಸಿ. ವಾರು ಬ್ಲಾಕ್ ಮಟ್ಟದಲ್ಲಿ ಬಟವಾಡೆ, ದಾಖಲಾತಿ ನಮೂನೆ**

**1. ಯೋಜನೆಯ ಹೆಸರು___________________________**

**(CHAPTER IV)**

| ಕ್ರ.ಸಂ. | ದಿನಾಂಕ | ವಿವರಗಳು (ಯೋಜನೆಯ ವಿವರಗಳು) | ಚೆಕ್ ಸಂಖ್ಯೆ | ಬಿಡುಗಡೆ ಮಾಡಿದ ಮೊತ್ತ | ವಿನಿಯೋಗದ ಪ್ರಮಾಣ ಪತ್ರ ವಿವರ | |
|---|---|---|---|---|---|---|
| | | | | | ದಿನಾಂಕ | ಮೊತ್ತ |
| | | | | | | |
| | | | | | | |
| | | | | | | |
| | | | | | | |
| | | | | | | |
| ಒಟ್ಟು | | | | | | |

**ಅಡಕ 9**

## ನಮೂನೆ–ಇ

**ವಿ.ಡಬ್ಲ್ಯು.ಎಸ್.ಸಿ.ಗಳಿಗೆ ಬಟವಾಡೆ ದಾಖಲಾತಿ ನಮೂನೆ**

**1. ಯೋಜನೆಯ ಹೆಸರು___________________________**

| ಕ್ರ.ಸಂ. | ದಿನಾಂಕ | ವಿವರಗಳು (ಯೋಜನೆಯ ವಿವರಗಳು) | ಚೆಕ್ ಸಂಖ್ಯೆ | ಮಂಜೂರಾದ ಮೊತ್ತ |
|---|---|---|---|---|
| | | | | |
| | | | | |
| | | | | |
| | | | | |
| | | | | |
| ಒಟ್ಟು | | | | |

ಅಡಕ 10

ನಮೂನೆಗಳು

ನಮೂನೆ ಜಿ.ಆರ್.ಎಫ್. 19 –ಎ.

(ಭಾರತ ಸರ್ಕಾರದ ನಿಯಮ 150, ನಿರ್ಣಯ 1 ನೋಡಿ)

ಉಪಯೋಗ ಪ್ರಮಾಣ ಪತ್ರದ ನಮೂನೆ

| ಕ್ರ.ಸಂ | ಪತ್ರ. ಸಂಖ್ಯೆ ಮತ್ತು ದಿನಾಂಕ | ಮೊತ್ತ |
|---|---|---|
| | | |

______ವರ್ಷದಲ್ಲಿ ______ಪರವಾಗಿ ಈ ಸಚಿವಾಲಯದ / ಇಲಾಖೆಯಿಂದ ಮಂಜೂರಾದ ಅನುದಾನದ ಪೈಕಿ ಬಳಕೆಯಾಗದೇ ಉಳಿದ ಹಿಂದಿನ ವರ್ಷದ ಶಿಲ್ಕು ರೂ. ___ಗಳನ್ನು ಮಂಜೂರು ಮಾಡಿದ --- ಉದ್ದೇಶಕ್ಕಾಗಿ ಉಪಯೋಗಿಸಲಾಗಿದೆ ಮತ್ತು ಬಳಕೆಯಾದೆ ವರ್ಷಾಂತ್ಯದಲ್ಲಿ ಉಳಿದಿರುವ ---ಮೊತ್ತವನ್ನು ಸರ್ಕಾರಕ್ಕೆ ಹಿಂದಿರುಗಿಸಲಾಗಿದೆ (ಸಂಖ್ಯೆ -- ದಿನಾಂಕ -- ) / ಮುಂಬರುವ ವರ್ಷದಲ್ಲಿ ನೀಡಲಾಗುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಲಾಗುವುದೆಂದು ಪ್ರಮಾಣೀಕರಿಸಲಾಗಿದೆ.

2. ಮಂಜೂರಾದ ಅನುದಾನನ್ನು ನಿಗಧಿತ ಷರತ್ತುಗಳ ಮಿತಿಯಲ್ಲಿಯೇ ತೃಪ್ತಿಕರವಾಗಿ ಬಳಸಲಾಗಿದೆಯೆಂದು ಹಾಗೂ ಮಂಜೂರಾದ ಅನುದಾನವು ಅದು ಮಂಜೂರಾದ ಉದ್ದೇಶಗಳಿಗೇ ವಿನಿಯೋಗವಾಗಿರುವ ಬಗ್ಗೆ ಈ ಕೆಳಗಿನ ತಪಾಸಣೆಗೆ ಒಳಪಡಿಸಿರುತ್ತೇನೆಂದು ಪ್ರಮಾಣೀಕರಿಸುತ್ತೇನೆ.

ತಪಾಸಣಾ ಪಟ್ಟಿಯ ವಿವರಗಳು

1.
2.
3.
4.
5.

ಸಹಿ____________________

ಹುದ್ದೆ ____________________

ದಿನಾಂಕ __________________

**3.**

**ಅಡಕ 11**

ಸಂಖ್ಯೆ : W-11013/4/2000-CRSP
ಭಾರತ ಸರ್ಕಾರ
ಗ್ರಾಮೀಣಾಭಿವೃದ್ಧಿ ಸಚಿವಾಲಯ
ಕುಡಿಯುವ ನೀರು ಪೂರೈಕೆ ವಿಭಾಗ

8ನೇ ಮಹಡಿ, ಪರ್ಯಾವರಣ ಭವನ,
ಸಿ.ಜಿ.ಓ. ಸಂಕೀರ್ಣ, ಲೋಧಿ ರಸ್ತೆ,
ನವದೆಹಲಿ–110 003
ಮಾರ್ಚ್ 4, 2003

ಗೆ,
ಗ್ರಾಮೀಣ ನೈರ್ಮಲ್ಯದ ಉಸ್ತುವಾರಿ ವಹಿಸಿಕೊಂಡಿರುವ ಎಲ್ಲ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಕಾರ್ಯದರ್ಶಿಗಳ ಗಮನಕ್ಕೆ

ವಿಷಯ: ಸಂಪೂರ್ಣ ನೈರ್ಮಲ್ಯ ಆಂದೋಲನದ (ಟಿ.ಎಸ್.ಸಿ.) ಅನುದಾನದ ಸಮರ್ಪಕ ಉಪಯೋಗ (ವಿನಿಯೋಗ) ಕುರಿತು

ಮಾನ್ಯರೆ,

ಸಂಪೂರ್ಣ ನೈರ್ಮಲ್ಯ ಆಂದೋಲನ (ಟಿ.ಎಸ್.ಸಿ.), ದೇಶಾದ್ಯಂತ ಹಲವು ಜಿಲ್ಲೆಗಳಲ್ಲಿ ಪ್ರಾರಂಭವಾಗಿರುವುದು ತಮಗೆಲ್ಲ ತಿಳಿದಿದೆ. ಯೋಜನೆಯು ಈ ಸಚಿವಾಲಯದಿಂದ ಮಂಜೂರಾಗಿರುವುದರಿಂದ, ಯೋಜನೆಯ ವಿವಿಧ ಕಾಮಗಾರಿಗಳಿಗಾಗಿ, ಆಡಳಿತಾತ್ಮಕ ವೆಚ್ಚಗಳಿಗಾಗಿ, ಪ್ರಾರಂಭಿಕ ಚಟುವಟಿಕೆಗಳಿಗಾಗಿ ಮತ್ತು ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳಿಗಾಗಿ ನಿಧಿಯನ್ನು ತೆಗೆದಿರಿಸಲಾಗಿದೆ.
ಇತ್ತೀಚೆಗೆ ನಮ್ಮ ಗಮನಕ್ಕೆ ಬಂದಿರುವುದೇನೆಂದರೆ ಕೆಲವು ಟಿ.ಎಸ್.ಸಿ. ಯೋಜನಾ ಅಧಿಕಾರಿಗಳು ಆಡಳಿತಾತ್ಮಕ ವೆಚ್ಚದ ನಿಧಿಗಳನ್ನು ವಾಹನ ಖರೀದಿ, ಕಛೇರಿ ಉಪಕರಣಗಳು ಇತ್ಯಾದಿ ಯಾವುದಕ್ಕೆ ಅನುಮತಿ ಇಲ್ಲವೋ (ಯಾವುದಕ್ಕೆ ವ್ಯಯಿಸಬಾರದೋ) ಅಂತಹ ಅಗತ್ಯಗಳಿಗೆ ಖರ್ಚು ಮಾಡುತ್ತಿದ್ದಾರೆ.

2. ಈ ನಿಟ್ಟಿನಲ್ಲಿ ಕೆಳಗಿನ ವೆಚ್ಚಗಳು ಮತ್ತು ಚಟುವಟಿಕೆಗಳನ್ನು ನಿರ್ದಿಷ್ಟವಾಗಿ ಆಡಳಿತ ವೆಚ್ಚದ ವತಿಯಿಂದ ಬಳಸುವುದನ್ನು ಪ್ರತಿಬಂಧಿಸಲಾಗಿದೆ. ದಯವಿಟ್ಟು ಗಮನಿಸಿ.

1. ವಾಹನಗಳ ಖರೀದಿ
2. ನಿವೇಶನ ಮತ್ತು ಕಟ್ಟಡಗಳ ಖರೀದಿ
3. ಕಛೇರಿ ಕಟ್ಟಡಗಳ ಮತ್ತು ವಿಶ್ರಾಂತಿ ಗೃಹಗಳ ನಿರ್ಮಾಣ (ಟಿ.ಎಸ್.ಸಿ. ಯೋಜನೆಗಳ ಶೌಚ ಸಮುಚ್ಚಯಗಳ ನಿರ್ಮಾಣವನ್ನು ಹೊರತುಪಡಿಸಿ)
4. ಕಛೇರಿ ಉಪಕರಣಗಳ ಖರೀದಿ
5. ಯಾವುದೇ ರಾಜಕೀಯ ಪಕ್ಷಗಳಿಗಾಗಿ ಅಥವಾ ಧಾರ್ಮಿಕ ಸಂಸ್ಥೆಗಳಿಗಾಗಿ ವ್ಯಯಿಸುವುದು
6. ಕೊಡುಗೆ(ಉಡುಗೊರೆ)ಗಳು ಮತ್ತು ದೇಣಿಗೆಗಳು
7. ಮೊಬೈಲ್ ಫೋನ್‌ಗಳ (ಸಂಚಾರಿ ದೂರವಾಣಿಗಳ) ಖರೀದಿ
8. ರಾಜ್ಯ ಮಟ್ಟದ ಸಂಸ್ಥೆಗಳಿಗೆ ಆಡಳಿತ ವೆಚ್ಚವನ್ನು ಭರಿಸಲು ನಿಧಿಗಳನ್ನು ವರ್ಗಾಯಿಸುವುದು

ಪ್ರಾರಂಭಿಕ ಚಟುವಟಿಕೆಗಳು

3. ಟಿ.ಎಸ್.ಸಿ. ಯೋಜನೆಗಳ ಪ್ರಾರಂಭಿಕ ಚಟುವಟಿಕೆಗಳ ಎರಡು ಮುಖ್ಯ ಅಂಶಗಳು– ಹೆಚ್ಚಿನ ಪೂರ್ವಭಾವಿ ಸಮೀಕ್ಷೆ ನಡೆಸುವುದು ಮತ್ತು ಯೋಜನೆಯ ಅನುಷ್ಠಾನದ ರೂಪುರೇಷೆಯ ತಯಾರಿಕೆ(ಪಿ.ಐ.ಪಿ).
ಇನ್ನೂ ಬಹಳಷ್ಟು ಯೋಜನೆಗಳಲ್ಲಿ ಪೂರ್ವಭಾವಿ ಸಮೀಕ್ಷೆ ಕೈಗೊಳ್ಳದೆ ಇರುವುದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಎಲ್ಲ ಯೋಜನೆಗಳು ಪೂರ್ವಭಾವಿ ಸಮೀಕ್ಷೆಯ ವರದಿ ಮತ್ತು ಯೋಜನಾ ಅನುಷ್ಠಾನ ರೂಪುರೇಷೆ(ಪಿ.ಐ.ಪಿ)ಯನ್ನು ಈ ಸಚಿವಾಲಯಕ್ಕೆ ಮಾರ್ಚ್ 31, 2003 ರೊಳಗಾಗಿ ಸಲ್ಲಿಸಬೇಕು. ತಪ್ಪಿದಲ್ಲಿ ಅಂತಹ ಯೋಜನೆಗಳ ಪ್ರಾರಂಭಿಕ ಚಟುವಟಿಕೆಗಳಿಗಾಗಿ ಮೀಸಲಿಟ್ಟ ನಿಧಿಯನ್ನು ಮುಂದಿನ ಕಂತುಗಳನ್ನು ಬಿಡುಗಡೆ ಮಾಡುವ ಸಮಯದಲ್ಲಿ ನಿಗಧಿತ ನಿಧಿಯಲ್ಲಿ ಕಡಿಮೆ ಮಾಡಲಾಗುವುದು.

ಐ.ಇ.ಸಿ.–ಮಾಹಿತಿ ಶಿಕ್ಷಣ ಮತ್ತು ಸಂಪರ್ಕ

4. ಜನಸಮುದಾಯಕ್ಕೆ ನೈರ್ಮಲ್ಯ ಅಭ್ಯಾಸಗಳ ಬಗ್ಗೆ ಅರಿವು ಮೂಡಿಸಲು, ಮಕ್ಕಳಿಗೆ ಶುಚಿತ್ವ ಶಿಕ್ಷಣ ನೀಡಲು ಮತ್ತು ಶಿಕ್ಷಕರುಗಳಿಗೆ ತರಬೇತಿ ನೀಡುವುದು ಇತ್ಯಾದಿಗಳಿಗೆ ಮಾಹಿತಿ ಶಿಕ್ಷಣ ಮತ್ತು ಸಂಪರ್ಕದ ನಿಧಿಯನ್ನು ಬಳಸಬೇಕು. ಮಾಹಿತಿ ಶಿಕ್ಷಣ ಮತ್ತು ಸಂಪರ್ಕದ ನಿಧಿಯು, ಮುಖ್ಯವಾಗಿ ಜನಸಮುದಾಯದ ಮನೋಭಾವವನ್ನು ಪರಿಣಾಮಕಾರಿಯಾಗಿ ಬದಲಾಯಿಸುವತ್ತ, ಗೃಹ ಶೌಚಾಲಯದ ಅವಶ್ಯಕತೆಯನ್ನು ಜನರೇ ಮನಗಂಡು, ಶೌಚಾಲಯಗಳ ನಿರ್ಮಾಣಕ್ಕೆ ಮುಂದಾಗುವಂತೆ ಅರಿವು ಮೂಡಿಸಲು, ಬೇಡಿಕೆ ಹೆಚ್ಚಿಸಲು ಉಪಯೋಗಿಸಬೇಕು.

5. ಇವುಗಳೊಡನೆ ಈ ಕೆಳಗಿನ ಅಂಶಗಳತ್ತಲೂ ಕೂಡ ಗಮನ ಹರಿಸಿ ಕ್ರಮ ಕೈಗೊಳ್ಳಬೇಕು.

1. ನೀರು ಪೂರೈಕೆ ಯೋಜನೆಯೊಡನೆ, ಸಂಪೂರ್ಣ ನೈರ್ಮಲ್ಯ ಆಂದೋಲನವನ್ನು ಮಿಳಿತಗೊಳಿಸಬೇಕು ಮತ್ತು ನೀರಿನ ಸಂಪರ್ಕ/ಸೌಲಭ್ಯ ಇಲ್ಲದ ಯಾವುದೇ ಶೌಚಾಲಯವೂ ನಿರ್ಮಾಣವಾಗಬಾರದು.
2. ಎಲ್ಲ ಸರ್ಕಾರೀ ಶಾಲೆಗಳಿಗೂ ಶೌಚಾಲಯಗಳನ್ನು ಒದಗಿಸಬೇಕು. ಹೆಣ್ಣು ಮಕ್ಕಳಿಗಾಗಿ (ವಿದ್ಯಾರ್ಥಿನಿಯರಿಗಾಗಿ) ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು.
3. ಎಲ್ಲ ಸಂಪೂರ್ಣ ನೈರ್ಮಲ್ಯ ಆಂದೋಲನ ಜಿಲ್ಲೆಗಳಲ್ಲೂ ಸ್ವಚ್ಛತೆ ಮತ್ತು ನೈರ್ಮಲ್ಯ ಶಿಕ್ಷಣ ಹಾಗೂ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
4. ಮಾಹಿತಿ ಶಿಕ್ಷಣ ಮತ್ತು ಸಂಪರ್ಕದ ಮೂಲಕ ಬಡತನದ ರೇಖೆಗಿಂತ ಮೇಲಿರುವ ಎಲ್ಲ ಕುಟುಂಬಗಳೂ ತಮ್ಮ ಮನೆಗಳಿಗೆ ಪ್ರತ್ಯೇಕ ಶೌಚಾಲಯ ಕಟ್ಟಿಸಿಕೊಳ್ಳುವಂತೆ ಪ್ರೋತ್ಸಾಹಿಸಿ ಉತ್ತೇಜನ ನೀಡಬೇಕು.

ತಮ್ಮ ವಿಶ್ವಾಸಿ,

ಡಾ|| ರಮೇಶ್ ಚಂದ್ರ ಪಾಂಡಾ
ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳು
ದೂರವಾಣಿ : 24361043
ಫ್ಯಾಕ್ಸ್ : 24364113